
ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವಂಬರ್ 2020
ಬೆಲೆ ರೂ. 1



## ಸಂಭ್ರಮದ ರಾಜ್ಯೋತ್ಸವ

# ಸಂಘದಲ್ಲಿ ರಾಜ್ಯೋತ್ಸವ



ದೆಹಲಿ ಕರ್ನಾಟಕ ಸಂಘದಲ್ಲಿ 65ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಧ್ವಜಾರೋಹಣ ಮಾಡಿ ಶುಭ ಹಾರೈಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಕಾರ್ಯಕಾರಿ ಸಮಿತಿ ಸದಸ್ಯ ಎನ್.ಆರ್. ಶ್ರೀನಾಥ್, ಶಿವಪ್ಪ ಎಂ., ಕಲಾವಿದ ಸುಧೀರ್ ಘಡ್ನೀಸ್ ಮೊದಲಾದವರು ಭಾಗವಹಿಸಿದರು.



ದಿನಾಂಕ 01.11.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಕನ್ನಡ ತಾಯಿ ಭುವನೇಶ್ವರಿಗೆ ನಮಿಸಿ ಪೂಜೆ ಸಲ್ಲಿಸಲಾಯಿತು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 । ಸಂಚಿಕೆ 2
ನವಂಬರ್ 2020

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜಿ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಮುಖಪುಟ ಚಿತ್ರ ಕೃಪೆ
ಸುಧೀರ್ ಫಡ್ನೀಸ್

# ಸಂಪಾದಕೀಯ

## ಇತಿಹಾಸಕಾರರನ್ನೂ ಸ್ಮರಿಸುವ

ಇತಿಹಾಸವನ್ನು ಯಾರು ಬೇಕಾದರೂ ನಿರ್ಮಿಸಬಹುದು, ಆದರೆ ಶ್ರೇಷ್ಠ ವ್ಯಕ್ತಿಗಳು ಮಾತ್ರ ಇತಿಹಾಸವನ್ನು ಬರೆಯಬಲ್ಲರು, ಎಂದು ಪ್ರಸಿದ್ಧ ಐರಿಷ್ ಕವಿ ಮತ್ತು ನಾಟಕಕಾರ ಆಸ್ಕರ್ ವೈಲ್ಡ್ ಹೇಳಿದ್ದು ಉಲ್ಲೇಖನೀಯ. ನಾವು ಕನ್ನಡಿಗರು ನಮ್ಮ ಇತಿಹಾಸ ಮತ್ತು ಪರಂಪರೆಯ ಕುರಿತು ಹೆಮ್ಮೆ ಪಡುತ್ತೇವೆ. ಈ ನಮ್ಮ ಅಭಿಮಾನ ಉಳಿದು ಬರಲು ಇತಿಹಾಸಕಾರರು ನಡೆಸಿದ ಸಂಶೋಧನೆ ಮತ್ತು ಕೃತಿಗಳಿಂದ ಸಾಧ್ಯವಾಗಿದೆ.

ಇತಿಹಾಸದ ಓದು ನಮ್ಮನ್ನು ನಾವು ತಿಳಿದುಕೊಳ್ಳಲು ನೆರವಾಗಿದೆ ಮತ್ತು ಈ ಮೂಲಕ ನಾವು ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಏಕೀಕೃತ ಕರ್ನಾಟಕದ ನೆನಪಿನೊಂದಿಗೆ ಏಕೀಕರಣಕ್ಕಾಗಿ ಹೋರಾಡಿದ ಮಹನೀಯರನ್ನು ರಾಜ್ಯೋತ್ಸವ ಸಂದರ್ಭದಲ್ಲಿ ನಾವು ಸ್ಮರಿಸಿಕೊಳ್ಳುತ್ತೇವೆ. ಇದರೊಂದಿಗೆ ಈ 65ನೇ ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ನಮ್ಮ ನಾಡಿನ ಶ್ರೇಷ್ಠ ಇತಿಹಾಸಕಾರರನ್ನೂ ಸ್ಮರಿಸಿಕೊಳ್ಳುವ.

ಕರ್ನಾಟಕ ಶಿಕ್ಷಣಕ್ಕೆ ಹೆಸರಾಗಿದೆ. ಉತ್ತರ ಭಾರತೀಯರು ಕೂಡಾ ಉನ್ನತ ಶಿಕ್ಷಣಕ್ಕೆ ಕರ್ನಾಟಕದ ಕಡೆ ನೋಡುತ್ತಾರೆ. ಪ್ರಾಚೀನ ಕಾಲದಲ್ಲೇ ಕರ್ನಾಟಕ ಉನ್ನತ ಶಿಕ್ಷಣಕ್ಕೆ ಹೆಸರಾಗಿತ್ತು ಎಂಬುದು ನಮಗೆ ಇತಿಹಾಸಕಾರರಿಂದ ತಿಳಿಯುತ್ತದೆ. ಶಿವಮೊಗ್ಗದ ಕೋಡಿಮಠ ಮತ್ತು ಗುಲ್ಬರ್ಗಾದ ನಾಗಾಯಿ ಉನ್ನತ ಶಿಕ್ಷಣಕ್ಕೆ ಹೆಸರುವಾಸಿಯಾಗಿತ್ತು ಎನ್ನುವುದು ಗಮನಾರ್ಹ. ಹನ್ನೆರಡನೇ ಶತಮಾನದ ಬಳ್ಳಿಗಾವೆಯ ಕೋಡಿಮಠದ ಶಾಸನ ಇದನ್ನು ತಿಳಿಸುತ್ತದೆ. ಭಾಷೆ, ವ್ಯಾಕರಣಗಳಲ್ಲದೆ ನಾಟಕ, ನೃತ್ಯ, ಸಂಗೀತ ಮೊದಲಾದ ಕಲಾ ಶಿಕ್ಷಣವೂ 'ಘಟಿಕಾ ಸ್ಥಾನ' ಎಂಬ ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಇತ್ತು ಎನ್ನುವುದು ಆಸಕ್ತಿದಾಯಕ.

ರಾಷ್ಟ್ರಕೂಟ ದೊರೆ ಮೂರನೇ ಕೃಷ್ಣ 'ಪರಾಂಗನಾ ಪುತ್ರ' ಅಂದರೆ ಪರಸ್ತ್ರೀಯರನ್ನು ತಾಯಿ ಎಂಬಂತೆ ಗೌರವಿಸುವ ದೊರೆ ಎಂದು ಮಧ್ಯಪ್ರದೇಶ ರಾಜ್ಯದ ಜುರಾದಲ್ಲಿನ ಕನ್ನಡ ಶಾಸನ ತಿಳಿಸುತ್ತದೆ. ತಮಿಳುನಾಡಿನ ಕಂಚಿಯ ದೇವಾಲಯದಲ್ಲಿ ಕನ್ನಡ ಅರಸನ ಔದಾರ್ಯವನ್ನು ಶಾಸನವೊಂದು ವರ್ಣಿಸುತ್ತದೆ ಎನ್ನುತ್ತಾರೆ ನಮ್ಮ ಇತಿಹಾಸಕಾರರು. ಹೀಗೆ ಶಾಸನಗಳು, ಹಳೆಯ ಲಿಖಿತ ದಾಖಲೆಗಳನ್ನು ಕಲೆ ಹಾಕಿ ಚರಿತ್ರೆಯನ್ನು ಬರೆದ ಇತಿಹಾಸಕಾರರ ಕೆಲಸ ಶ್ಲಾಘನೀಯ.

ಕರ್ನಾಟಕ ಹಲವು ಶ್ರೇಷ್ಠ ಇತಿಹಾಸಕಾರರನ್ನು ಕಂಡಿದೆ. ಪ್ರೊ. ಬಿ.ಎ. ಸಾಲೆತ್ತೂರು, ಕೆ.ಎ. ನೀಲಕಂಠ ಶಾಸ್ತ್ರಿ, ಪ್ರೊ. ಎಂ.ವಿ. ಕೃಷ್ಣರಾವ್, ಪಿ. ಗುರುರಾಜ್ ಭಟ್, ಶ್ರೀಕಂಠ ಶಾಸ್ತ್ರಿ, ಪ್ರೊ. ಶೇಕ್ ಅಲಿ, ಡಾ. ಸೂರ್ಯನಾಥ ಕಾಮತ್, ಪ್ರೊ. ಷ. ಶೆಟ್ಟರ್, ಡಾ. ವಸಂತ ಮಾಧವ ಮೊದಲಾದವರ ಪೂರ್ವಾಗ್ರಹರಹಿತ ಇತಿಹಾಸ ಕೃತಿಗಳು ಅನನ್ಯವಾಗಿದೆ.

ಈಚೆಗೆ ಇತಿಹಾಸದ ಕುರಿತು ಬರೆಯುವ ಲೇಖಕರು ಪ್ರಭುತ್ವವನ್ನು ಅಥವಾ ಪ್ರಬಲ ಸಮುದಾಯಗಳನ್ನು ಗಮನದಲ್ಲಿರಿಸಿ ಬರೆಯುವುದನ್ನು ಕಾಣಬಹುದು. ಇದು ಪ್ರಭುತ್ವವನ್ನು ಓಲೈಸುವ ಇನ್ನೊಂದು ಬಗೆ. ಇದು ವಿಷಾದಕರ. ಈ ಹಿನ್ನೆಲೆಯಲ್ಲಿ ನಮ್ಮ ಹಿಂದಿನ ಇತಿಹಾಸಕಾರರು ಪೂರ್ವಾಗ್ರಹವಿಲ್ಲದೆ ರಚಿಸಿದ ಇತಿಹಾಸ ಕೃತಿಗಳು ನಮಗೆ ಮಾದರಿಯಾಗಬೇಕು. ಸ್ವಹಿತಕ್ಕಾಗಿ ಪ್ರಮುಖ ಐತಿಹಾಸಿಕ ಸಂಗತಿಗಳನ್ನು ಮುಚ್ಚಿಡುವುದು ಅಥವಾ ಕತ್ತಲಲ್ಲಿ ಇಡುವುದು ಇತಿಹಾಸವನ್ನು ತಿರುಚಿದಷ್ಟೇ ದೊಡ್ಡ ಅಪರಾಧವೆನಿಸುತ್ತದೆ. ಇತಿಹಾಸಕ್ಕೆ ಅಪಚಾರವಾಗದಂತೆ ಬರೆಯುವುದು ಇಂದಿನ ಅಗತ್ಯ.

ಕನ್ನಡಿಗರು ಹೆಮ್ಮೆಪಡುವ ವಿಜಯನಗರದ ಸಾಮ್ರಾಜ್ಯ, ಮೈಸೂರು ಅರಸರ ಕಲಾವೈಭವ, ಕಿತ್ತೂರಿನ ಶೌರ್ಯದ ಚರಿತ್ರೆ, ಅಮರಸುಳ್ಯದ ಬಂಡಾಯ, ನಾಡಪ್ರಭು ಕೆಂಪೇಗೌಡರು ತಂದ ಸುಧಾರಣೆಗಳು, ವಿವಿಧ ರಾಜವಂಶಗಳ ಹಿರಿಮೆ ಗರಿಮೆಗಳನ್ನು ಇತಿಹಾಸ ತಜ್ಞರು ತಮ್ಮ ಶ್ರೇಷ್ಠ ಕೃತಿಗಳಲ್ಲಿ ದಾಖಲಿಸಿದ್ದಾರೆ. ನಮ್ಮ ಅರಿವನ್ನು ವಿಸ್ತರಿಸಲು ಈ ಕೃತಿಗಳನ್ನು ನಾವು ಓದಬೇಕು. ನಾಡು, ನುಡಿಯ ಕುರಿತ ಅಭಿಮಾನ ನಮ್ಮಲ್ಲಿ ಸದಾ ಇರಲಿ.

ನಿಮಗೆಲ್ಲರಿಗೂ 65ನೇ ಕರ್ನಾಟಕ ರಾಜ್ಯೋತ್ಸವ ಮತ್ತು ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು.

ಡಾ. ಅವನೀಂದ್ರನಾಥ್ ರಾವ್

### ಮುಖಪುಟ ಚಿತ್ರ

ಮೈಸೂರು ದಸರಾ ಹಬ್ಬದ ಸಂದರ್ಭದಲ್ಲಿ ದೆಹಲಿಯ ಖ್ಯಾತ ಕಲಾವಿದ ಸುಧೀರ್ ಫಡ್ನೀಸ್ ರಚಿಸಿದ ಕಲಾಕೃತಿ ಈ ಬಾರಿಯ ಮುಖಪುಟ ಚಿತ್ರವಾಗಿ ಮೂಡಿ ಬಂದಿದೆ. ಬಹುಮಾನ ವಿಜೇತ ಈ ಅಪೂರ್ವ ಬಾಟಿಕ್ ಕಲಾಕೃತಿಯನ್ನು ನಮಗೆ ನೀಡಿದ ಸುಧೀರ್ ಫಡ್ನೀಸ್ ಅವರಿಗೆ ಅಭಿನಂದನೆಗಳು ಮತ್ತು ನಮ್ಮ ಹಾರ್ದಿಕ ಧನ್ಯವಾದಗಳು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 2
ನವಂಬರ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ಕೊರೊನಾ ಕಾಲದ ರಾಜ್ಯೋತ್ಸವ ಸಂಭ್ರಮ

ದೆಹಲಿಯಲ್ಲಿ ಕೆಲಕಾಲದಿಂದ ಹದ್ದುಬಸ್ತಿನಲ್ಲಿದ್ದ ಕೊರೊನಾದ ಹಾವಳಿ ಏರುತ್ತಿರುವ ಚಳಿ ಮತ್ತು ವಾಯುಮಾಲಿನ್ಯದ ಕಾರಣಗಳಿಂದಾಗಿ ಮತ್ತೆ ತನ್ನ ಬಾಹುಗಳನ್ನು ಚಾಚುತ್ತಿರುವ ಲಕ್ಷಣಗಳು ತೋರುತ್ತಿವೆ. ಅಕ್ಟೋಬರನಿಂದ ನವೆಂಬರನತ್ತ ಕಾಲಿಡುತ್ತಿರುವ ದೆಹಲಿ ಈ ಕಾಲದ ನವಿರಾದ ಚಳಿಯ ಸಂತಸವನ್ನು ಉಣಲಾರದ ಸ್ಥಿತಿಯಲ್ಲಿದೆ. ಹಬ್ಬ ಹರಿದಿನಗಳ ಕಾಲವನ್ನು ಮನೆಯಲ್ಲಿಯೇ ಕುಳಿತು ಕಳೆಯುವಂತಾಗಿದೆ. ನವೆಂಬರ ತಿಂಗಳಿನುದ್ದಕ್ಕೂ ದೆಹಲಿ ಕರ್ನಾಟಕ ಸಂಘದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಾವು ರಾಜ್ಯೋತ್ಸವದ ಅಂಗವಾಗಿ ಆಚರಿಸುತ್ತಿದ್ದೆವು. ಈಗ ಹೆಚ್ಚುತ್ತಿರುವ ಕೊರೊನಾದ ಕಾರಣದಿಂದಾಗಿ ಈ ಎಲ್ಲ ತಿಂಗಳುದ್ದದ ಜನಭರಿತ ಕಾರ್ಯಕ್ರಮಗಳಿಗೆ ನಾವು ಮೂಗುದಾರ ತೊಡಿಸಬೇಕಾಗಿದೆ. ಆದರೂ ನವೆಂಬರ ಒಂದರಂದು ನಾವು ಸಂಘದ ಆವರಣದಲ್ಲಿ ಸೇರಿ ಧ್ವಜಾರೋಹಣ ಮಾಡುವ ಮೂಲಕ, ರಾಷ್ಟ್ರಗೀತೆ–ನಾಡಗೀತೆಯನ್ನು ಹಾಡುವ ಮೂಲಕ, ಕನ್ನಡಮ್ಮನಿಗೆ ಜಯಕಾರ ಹಾಕುವ ಮೂಲಕ, ರಾಜ್ಯೋತ್ಸವದ ತಿಂಗಳ ಉತ್ಸಕ್ಕೆ ಚಾಲನೆ ನೀಡಿದೆವು. ಇದು ಒಂದು ಬಗೆಯಲ್ಲಿ ಸಾಂಕೇತಿಕವೆಂದೆನಿಸಿದರೂ ಒಂದು ಬಗೆಯ ಉತ್ಸಾಹ ಹಾಗೂ ಗರಿಮೆ ಮನದಾಳದಲ್ಲಿ ಹರಿಯುತ್ತಿರುವುದು ಸಹಜ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕುರಿತಾಗಿನ ಪ್ರೀತಿ ಮೂಲಭೂತವಾಗಿ ನಮ್ಮ ಅಂತರಾಳದಲ್ಲಿ ಇರಬೇಕಾದರ ಅವಶ್ಯಕತೆ ಈ ಜಾಗತಿಕರಣದ ಕಾಲದಲ್ಲಿ ಎಂದಿಗಿಂತ ಈಗ ಹೆಚ್ಚಾಗಿದೆ. ಕುವೆಂಪುರವರು ಹೇಳಿದ ಹಾಗೆ ಮನೆಯ ಕಿಟಕಿಗಳ ಮೂಲಕ ಆಂಗ್ಲ ಭಾಷೆ ಬರಲಿ; ಆದರೆ ಮನೆಯ ಹೆಬ್ಬಾಗಿಲಿನಿಂದ ಕನ್ನಡವೆ ನಮ್ಮ ಮನೆಯೊಳಕ್ಕೆ ಬರವಂತಿರಬೇಕು.

ಇತ್ತಿಚೀನ ಹೊರನಾಡಿನ ಕೆಲ ಕನ್ನಡ ಭಾಷೆ ಮತ್ತು ಸಂಸ್ಕೃತಿಗಳ ಕುರಿತಾದ ಕೆಲ ಬೆಳವಣಿಗೆಗಳನ್ನು ನಾವು ಗಮನಿಸಬೇಕು. ಮೊದಲನೆಯದಾಗಿ ದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ (ಜೆ.ಎನ್.ಯು) ಭಾರತೀಯ ಭಾಷಾ ಸಂಸ್ಥಾನದ ಕನ್ನಡ ಪೀಠದಲ್ಲಿ ಪ್ರಾಧ್ಯಾಪಕರಾಗಿ ಕಳೆದ ಐದು ವರ್ಷಗಳಿಂದ ಅರ್ಥಪೂರ್ಣವಾದ ಶೈಕ್ಷಣಿಕ ಚಟುವಟಿಕೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಪುರುಷೊತ್ತಮ ಬಿಳಿಮಲೆಯವರು ತಮ್ಮ ಅವಧಿಯನ್ನು ಮುಗಿಸಿ ನಿವೃತ್ತಿ ಹೊಂದಿದ್ದಾರೆ. ಅವರಿಗೆ ಅಭಿಮತ ತನ್ನ ಹಿಂದಿನ ಸಂಚಿಕೆಯಲ್ಲಿ ತನ್ನ ಶುಭಹಾರೈಕೆಗಳನ್ನು ಸೂಚಿಸುತ್ತ ಅವರು ತಮ್ಮ ಕಾರ್ಯಕಾಲದಲ್ಲಿ ರೂಪಿಸಿದ ಮತ್ತು ಆಯೋಜಿಸಿದ ಕನ್ನಡ ಕಮ್ಮಟಗಳನ್ನು ವಿವರವಾಗಿ ನಮೂದಿಸಿದ್ದನ್ನು ಇಲ್ಲಿ ನೆನೆಪಿಸಿಕೊಳ್ಳುತ್ತೇನೆ. ಅವರ ಜಾಗೆಯಲ್ಲಿ ಈಗ ಹೊಸದಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರೊ. ವಿಶ್ವನಾಥ  ನಿಯುಕ್ತಿ ಹೊಂದಿ ಕನ್ನಡ ಪೀಠದ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡಿದ್ದಾರೆ. ಅವರಡಿಯಲ್ಲಿ ಜೆ.ಎನ್.ಯು.ವಿನ ಕನ್ನಡ ಪೀಠ ಇನ್ನೂ ಉತ್ತಮವಾದ ಕೆಲಸವನ್ನು ಮಾಡಲಿ ಎಂದು ನಾವೆಲ್ಲ ಈ ರಾಜ್ಯೋತ್ಸವದ ಸಂದರ್ಭದಲ್ಲಿ ಹಾರೈಸೋಣ. ಇನ್ನೂ ಮುಖ್ಯವಾಗಿ ಈ ಪ್ರತಿಷ್ಠಿತ ಕನ್ನಡ ಪೀಠ ನಿರಂತರವಾಗಿ ತನ್ನ ಭಾಷಾ ವೈವಿಧ್ಯವನ್ನು ದೆಹಲಿ ಮತ್ತು ಉತ್ತರ ಭಾರತದಲ್ಲಿ ಪಸರಿಸುವಂತಾಗಲಿ ಎಂಬ ಹಂಬಲ ನಮ್ಮೆಲ್ಲರದ್ದು. ಅದೇ ರೀತಿಯಲ್ಲಿ ದೆಹಲಿ ವಿಶ್ವವಿದ್ಯಾಲಯದ ಭಾಷಾ ವಿಭಾಗದಲ್ಲಿ ಇನ್ನೂ ಖಾಲಿಯಾಗಿ ಕುಳಿತಿರುವ ಕನ್ನಡ ಭಾಷಾ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿಯನ್ನು ತ್ವರಿತವಾಗಿ ಮಾಡುವ ಬಗ್ಗೆ ಘನ ಕರ್ನಾಟಕ ಸರಕಾರ ಸಂಬಂಧಪಟ್ಟ ವಿಶ್ವವಿದ್ಯಾಲಯದ ಅಧಿಕಾರಿ ವರ್ಗಗಳ ಮೇಲೆ ಒತ್ತಡವನ್ನು ತರಬೇಕೆಂದು ನಾವು ಆಗ್ರಹ ಪಡಿಸುತ್ತೇವೆ. ಇದರ ಜೊತೆಗೆ ಉತ್ತರ ಭಾರತದಲ್ಲಿ ಕಾಶಿ ವಿದ್ಯಾಪೀಠದಲ್ಲಿರುವ (ಬನಾರಸ್ ಹಿಂದು ವಿಶ್ವವಿದ್ಯಾಲಯ) ನೇಮಕಾತಿಯಾಗದೆ ನೆನೆಗುದಿಗೆ ಬಿದ್ದಿರುವ (ಬಹುಶಃ ಮರೆತು ಹೋಗಿರುವ) ಕನ್ನಡ ಭಾಷಾ ಪ್ರಾಧ್ಯಾಪಕರ ಹುದ್ದೆಯನ್ನು ಪುನಶ್ಚೇತನಗೊಳಿಸುವ ಕಾರ್ಯವೂ ತ್ವರಿತವಾಗಿ ಆಗಬೇಕಿದೆ. ಇದನ್ನು ನಮ್ಮ ಘನ ಕರ್ನಾಟಕ ಸರಕಾರ ಗಮನಿಸಿ ಅದಕ್ಕೆ ಬೇಕಾದ ಎಲ್ಲ ಆಡಳಿತಾತ್ಮಕ ನಿಶ್ಚಯಗಳನ್ನು ಮತ್ತು ಸವಲತ್ತುಗಳನ್ನು ಪುನಃ ಪರಿಶೀಲಿಸುವ ಕೆಲಸವನ್ನು ತ್ವರಿತವಾಗಿ ಮಾಡಲಿ ಎಂಬುದು ನಮ್ಮೆಲ್ಲರ ಆಗ್ರಹ. ಇದಕ್ಕೆ ಬೇಕಾದ ಎಲ್ಲ ಬಗೆಯ ಸಹಾಯ ಮತ್ತು ಬೆಂಬಲವನ್ನು ನೀಡಲು ದೆಹಲಿ ಕರ್ನಾಟಕ ಸಂಘ ಸದಾ ಸಿದ್ಧವಿದೆಯೆಂಬ ಮಾತನ್ನು ನಮೂದಿಸಬಯಸುತ್ತೇವೆ. ಎಲ್ಲ ಉತ್ತರ ಭಾರತದ ವಿವಿಧ ವಿಶ್ವವಿದ್ಯಾಲಯಗಳಲ್ಲಿರುವ ಕನ್ನಡ ವಿಭಾಗಗಳ ಮತ್ತು ಪೀಠಗಳ ಪುನರುತ್ಥಾನದ ಕುರಿತಾಗಿ ಕನ್ನಡ ಪ್ರಾಧಿಕಾರಕ್ಕೆ ಮತ್ತು ಕರ್ನಾಟಕ ಸರಕಾರಕ್ಕೆ ದೆಹಲಿ ಕರ್ನಾಟಕ ಸಂಘ ಕಾಲಕಾಲಕ್ಕೂ ಅಗ್ರಹಪೂರ್ವಕವಾಗಿ ತನ್ನ ಅಹವಾಲುಗಳನ್ನು ಸಲ್ಲಿಸಿದ್ದನ್ನೂ ಸಹ ಈ ಸಂದರ್ಭದಲ್ಲಿ ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ.

ಮುಂಬೈ ಜೊತೆಗೆ ಕನ್ನಡದ ನಂಟು ಬಹಳ ಹಳೆಯದು. ಮುಂಬೈ ಶಹರದಲ್ಲಿ ಮತ್ತು ಮಹಾರಾಷ್ಟ್ರದ ಹಲವಾರು ಪ್ರದೇಶಗಳಲ್ಲಿ, ಮುಖ್ಯವಾಗಿ ಗಡಿನಾಡಿನ ಪ್ರದೇಶಗಳಲ್ಲಿ, ಕನ್ನಡವೂ ಸಹ ಮರಾಠಿಯೊಂದಿಗೆ ಒಂದು ಪ್ರಮುಖ ಮತ್ತು ಸಹಜವಾದ ಭಾಷೆಯಾಗಿದೆ. ಈ ಕಾರಣಕ್ಕಾಗಿ ಹಲವಾರು ದಶಕಗಳಿಂದ ಮುಂಬೈ ಆಕಾಶವಾಣಿಯಿಂದ ನಿರ್ಧಿಷ್ಟ ಕಾಲಾವಧಿಯಲ್ಲಿ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದದ್ದನ್ನು ನಾವೆಲ್ಲ ಅರಿತಿದ್ದೇವೆ. ಆದರೆ, ಈಗ ಈ ಕನ್ನಡದ ಕಾರ್ಯಕ್ರಮಗಳ ಪ್ರಸಾರವನ್ನು ಮುಂಬೈ ಆಕಾಶವಾಣಿಯಿಂದ ಪೂರಾ ಕೈಬಿಡಲಾಗಿದೆಯೆಂಬ ವರದಿಯಿಂದಾಗಿ ಹೊರನಾಡ ಕನ್ನಡಿಗರಲ್ಲಿ ಇದು ಸಾಕಷ್ಟು ಆಕ್ರೋಶಕ್ಕೆ ಕಾರಣವಾಗಿದೆ. ಇದನ್ನು ಕೇಂದ್ರ ಮತ್ತು ಮಹಾರಾಷ್ಟ್ರದ ಸರಕಾರಗಳೊಂದಿಗೆ ಚರ್ಚಿಸಿ ಈ ಆಕಾಶವಾಣಿಯ ಕನ್ನಡ ವಿಭಾಗವನ್ನು ಮತ್ತೆ ಮೊದಲಿನಂತೆ ಇರಿಸಿಕೊಳ್ಳುವ ಕೆಲಸವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಾಗಿದೆ. ದೆಹಲಿಯಿಂದಲೂ ಆಗಾಗ್ಗೆ ಆಕಾಶವಾಣಿಯಿಂದ ಕನ್ನಡ ಕುರಿತಾದ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ದೆಹಲಿಯಿಂದ ಪ್ರಸಾರವಾಗುತ್ತಿದ್ದ ಮೂರು ಬಾರಿಯ ಕನ್ನಡ ವಾರ್ತೆಗಳನ್ನು ಕರ್ನಾಟಕದ ಎಲ್ಲ ಬಾನುಲಿ ಕೇಂದ್ರಗಳು ಮರುಪ್ರಸಾರ ಮಾಡುತ್ತಿದ್ದವು. ಹೀಗಾಗಿ ಸಾಕಷ್ಟು ಕನ್ನಡಿಗರು ದೆಹಲಿಯ ಆಕಾಶವಾಣಿಯಲ್ಲಿದ್ದರು. ಈಗ ಅವರೆಲ್ಲರ ಸಂಖ್ಯೆ ಕ್ಷೀಣಿಸಿ ಹೋಗಿದೆ. ಬೆರಳಣಿಕೆಯಷ್ಟು ಮಂದಿ ಕನ್ನಡಿಗರು ಈಗ ಆಕಾಶವಾಣಿಯಲ್ಲಿದ್ದಾರೆ. ಈಗ ಹತ್ತಾರು ವರ್ಷಗಳಿಂದ ಕಾಲ ಬದಲಾಗಿದೆ; ತಂತ್ರಜ್ಞಾನ ಬದಲಾಗಿದೆ. ದೆಹಲಿಯಿಂದಲೇ ಎಲ್ಲ ಕನ್ನಡ ಕಾರ್ಯಕ್ರಮಗಳನ್ನು ನಡೆಸಬೇಕಾದ ಅಗತ್ಯಗಳು ಕಾಣುತ್ತಿಲ್ಲವೆಂಬ ವಾದವನ್ನು ನಾವು ಒಪ್ಪಿಕೊಳ್ಳಬಹುದು. ಆದರೆ, ಆಕಾಶವಾಣಿಗೆ ಅದರದ್ದೇ ಆದ ಪ್ರಾಮುಖ್ಯತೆ ಈಗಲೂ ಇದೆ. ಅದನ್ನು ಮನಗಂಡು ಅದರ ಕನ್ನಡದ ಅಂಶಗಳನ್ನು ಇರಿಸಿಕೊಳ್ಳುವ ಕುರಿತಾಗಿ ನಾವು ಅಗ್ರಹ ಪಡಿಸಬೇಕಾಗಿದೆ. ಎಲ್ಲ ಪ್ರಮುಖ ಭಾಷೆಗಳ ಒಂದಾದರೂ ಎಫ್ ಎಮ್ ಚಾನೆಲ್‌ಗಳನ್ನು ದೆಹಲಿಯಿಂದ ಪ್ರಸರಣಗೊಳಿಸುವ ಬಗ್ಗೆ ವಿಚಾರ ಮಾಡಬಹುದಾಗಿದೆ.

ಕೊನೆಯಲ್ಲಿ, ಕೊರೊನಾದ ಕಸಿವಿಸಿಯ ಈ ದಿನಗಳಲ್ಲಿ ನೆನಪುಗಳ ಹಂದರವನ್ನು ಆಗಾಗ್ಗಿನ ದೂರವಾಣಿಯ ಕರೆಗಳ ಮೂಲಕ ಕೆದರುವ ಕೆಲಸ ಮಾಡುತ್ತಿರುವ ದೆಹಲಿಯ ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿಯವರ ಜೀವನೊತ್ಸಾಹ ಮತ್ತು ಕನ್ನಡ ಪ್ರೇಮ ಎಣೆಯಿಲ್ಲದ್ದು. ಅವರು ರಾಜ್ಯೋತ್ಸವದ ಸಂಭ್ರಮದ ಸಂದರ್ಭದಲ್ಲಿ ದೂರವಾಣಿಯ ಕರೆ ಮಾಡಿ ದೆಹಲಿಯಲ್ಲಿ 1978 ರಲ್ಲಿ ನಡೆದ 50 ನೇಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪುಗಳನ್ನು ಹಂಚಿಕೊಂಡರು. ಅವರು ದೆಹಲಿಯಲ್ಲಿ, ಅದೂ ನಮ್ಮ ಕನ್ನಡ ಶಾಲೆಯ ಆವರಣದಲ್ಲಿ ನಡೆದ ಈ ಸಾಹಿತ್ಯ ಸಮ್ಮೇಳನದ ರೂವಾರಿಗಳನ್ನು, ಆಗ ಅದರ ಯಶಸ್ಸಿಗೆ ದುಡಿದ ಹಲವಾರು ಕನ್ನಡಿಗರನ್ನು ನನ್ನ ನೆನೆಪಿಗೆ ತಂದುಕೊಟ್ಟರು. ದಿ. ಶ್ರೀ ಜಿ.ಪಿ. ರಾಜರತ್ನಂ ರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನ ಅತ್ಯಂತ ವಿಶಿಷ್ಟವಾದದ್ದು. ಅವರೂ ಸಹ ಖುದ್ದಾಗಿ ಈ ಸಮ್ಮೇಳನದಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ ಹಗಲುರಾತ್ರಿ ಕೆಲಸ ಮಾಡಿದ ಪರಿಯನ್ನು ವಿವರವಾಗಿ ತಮ್ಮ ನೆನಪಿನ ಗಾಳದಿಂದ ಎತ್ತಿ ನನ್ನದೆರು ಇಟ್ಟರು. ಇದಾಗಿ ಈಗ 42 ವರ್ಷಗಳು ಸಂದಿವೆ. ಈ ಸಮ್ಮೇಳನದ ಯಶಸ್ಸಿಗೆ ದುಡಿದ ಹಲವಾರು ದೆಹಲಿ ಕನ್ನಡಿಗರು ಈಗ ನಮ್ಮೊಂದಿಗಿಲ್ಲವೆಂಬ ಕಳಕಳಿ ಮತ್ತು ನೆನಪು ಅವರದ್ದು. ಮುಂಬರುವ ವರ್ಷಗಳಲ್ಲಿ ಮತ್ತೊಮ್ಮೆ ಈ ಸಮ್ಮೇಳನ ದೆಹಲಿಯತ್ತ ಬರುವಂತಾಗಲಿ ಎಂಬ ಹಾರೈಕೆ ನಮ್ಮೆಲ್ಲರದ್ದು. ಈ ನೆನಪುಗಳ ಮಹಾಪೂರದಲ್ಲಿ ರಾಜ್ಯೋತ್ಸವದ ಸಂಭ್ರಮವನ್ನು ಅದೂ ಈ ಕೊರೊನಾ ಕಾಲದಲ್ಲಿ ಹಂಚಿಕೊಳ್ಳುವ ಮತ್ತು ಹುಡುಕುವ ಸೆಲೆಯನ್ನು ಜೀವಂತವಾಗಿರಿಸಿದ ಡಾ. ಚಿಂತಾಮಣಿಯವರಿಗೆ ನಮನಗಳು. ಎಲ್ಲರಿಗೂ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ತಮಗೆ ತಮ್ಮ ಕುಟುಂಬಕ್ಕೆ ಕರ್ನಾಟಕ ರಾಜ್ಯೋತ್ಸವ ಮತ್ತು ದೀಪಾವಳಿ ಹಬ್ಬದ ಶುಭಾಶಯಗಳು.

ಪ್ರತಿವರ್ಷ ರಾಜ್ಯೋತ್ಸವದ ಅಂಗವಾಗಿ ಅತ್ಯುತ್ತಮ ಕಾರ್ಯಕ್ರಮಗಳನ್ನು ಕರ್ನಾಟಕದಿಂದ ಬಂದ ಕಲಾವಿದರ ಜೊತೆಯಲ್ಲಿ ಆಯೋಜನೆ ಮಾಡುತ್ತಿದ್ದೆವು. ಮಾರಕ ರೋಗ ಕೊರೊನಾ ಸಂದರ್ಭದಲ್ಲಿ ನಮ್ಮ ರಾಜ್ಯದಿಂದ ಕಲಾವಿದರನ್ನು ಕರೆಸಿ ಕಾರ್ಯಕ್ರಮಗಳನ್ನು ಮಾಡಲು ತುಂಬಾ ಕಷ್ಟಕರವಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರವಾಗಿ ಸಾರ್ವಜನಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಈ ಹಿತದೃಷ್ಟಿಯಿಂದ ಈ ಬಾರಿ ಕಾರ್ಯಕ್ರಮಗಳು ತುಂಬಾ ಕಡಿಮೆಯಾಗುತ್ತಿದೆ.

ಆದರೂ ಸಹ ದಿನಾಂಕ 08.11.2020ರ ಭಾನುವಾರ ಆರೋಗ್ಯದ ಬಗ್ಗೆ ಕೊರೊನ ಹಿನ್ನೆಲೆಯಲ್ಲಿ ಚಳಿಗಾಲ ಸಂದರ್ಭದಲ್ಲಿ ಖ್ಯಾತ ತಜ್ಞರಾದ ಡಾ. ಭೀಮ ಭಟ್ ಹಾಗೂ ಡಾ. ನಿರಂಜನ್ ನಾಯ್ಕ್‌ರವರ ನೇರ ಸಂದರ್ಶನ ಮತ್ತು ಅವರ ಸಲಹೆಗಳನ್ನು ನಮ್ಮ ಸದಸ್ಯರಿಗೆ ನೀಡುವ ಸಲುವಾಗಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ.

ಜೊತೆಗೆ ಆರೋಗ್ಯ ಫಿಟ್‌ನೆಸ್ ವಿಷಯದಲ್ಲಿ ದೆಹಲಿ ಕರ್ನಾಟಕ ಸಂಘ ಫಿಟ್ ಎಂಬ ಒಂದು ಕಾರ್ಯಕ್ರಮ ಆಯೋಜಿಸಿದೆ. ತಾವು ಇರುವಲ್ಲೇ ವಾಕ್ ಮಾಡುವ ಮೂಲಕ ತಮ್ಮ ಫಿಟ್‌ನೆಸ್‌ಗಾಗಿ ಆರೋಗ್ಯ ಹಿತದೃಷ್ಟಿಯಿಂದ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದರಲ್ಲಿ ಹೆಚ್ಚಿನ ಸದಸ್ಯರು ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಅತಿ ಹೆಚ್ಚು ಸ್ಟೆಪ್ ಮಾಡಿದ ಸದಸ್ಯರಿಗೆ ಬಹುಮಾನಗಳು ಸಹ ನೀಡಲಾಗುತ್ತಿದೆ.

ದೆಹಲಿಯ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ಮೂಲಕ ಲೈವ್ ಮುಖಾಂತರ ದೆಹಲಿ ಕರ್ನಾಟಕ ಸಂಘದಲ್ಲಿ ಸಂಗೀತ, ನೃತ್ಯ ಕಾರ್ಯಕ್ರಮಗಳನ್ನು ನವೆಂಬರ್ 22 ಮತ್ತು 29 ರಂದು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮವನ್ನು ಆನ್‌ಲೈನ್ ಮುಖಾಂತರ ಮಾಡಲಾಗುತ್ತದೆ. ಕಲಾವಿದರಿಗೆ ಮತ್ತು ಪೋಷಕರಿಗೆ ನೇರವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಭಾಗಿ ಆಗುವ ಅವಕಾಶವಿರುತ್ತದೆ. ನೀವೆಲ್ಲರೂ ಫೇಸ್‌ಬುಕ್ ಲೈವ್ ಮುಖಾಂತರ ಕಾರ್ಯಕ್ರಮವನ್ನು ವೀಕ್ಷಿಸಬಹುದು.

ಆತ್ಮೀಯ ಬಂಧುಗಳೇ, ದೆಹಲಿಯಲ್ಲಿ ಇನ್ನೂ ತುಂಬಾ ಚಳಿ ಇರುತ್ತದೆ. ಹಾಗಾಗಿ ನಮ್ಮ ಕನ್ನಡಿಗರು ತುಂಬಾ ಜಾಗೃತೆಯಿಂದ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಇರಬೇಕು. ಮಾರಕ ರೋಗ ಕೊರೊನವನ್ನು ತೊಲಗಿಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘ



ಆತ್ಮೀಯ ಕನ್ನಡ ಬಂಧುಗಳೇ ಕನ್ನಡ ರಾಜ್ಯೋತ್ಸವ ಅಂಗವಾಗಿ ದೆಹಲಿ ಕರ್ನಾಟಕ ಸಂಘದಲ್ಲಿ ಸಂಗೀತ ಮತ್ತು ನೃತ್ಯ ಸಂಭ್ರಮವನ್ನು ಆಯೋಜನೆ ಮಾಡಲಾಗುತ್ತಿದೆ.

ಮಾರಕ ರೋಗ ಕೊರೋನಾ ಇರುವ ಕಾರಣ ಸಾರ್ವಜನಿಕ ಅಂತರವನ್ನು ಕಾಪಾಡಿಕೊಂಡು ಸ್ಥಳೀಯ ಸದಸ್ಯರಿಗೆ ಮತ್ತು ಕನ್ನಡಿಗರ ಮಕ್ಕಳಿಗೆ ಈ ಅವಕಾಶ ಇದೆ.

ದಿನಾಂಕ 22 ಮತ್ತು 29ರಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಭಾಗಿಯಾಗುವ ಅವಕಾಶ ಕಲಾವಿದರಿಗೆ ಮತ್ತು ಪೋಷಕರಿಗೆ ಮಾತ್ರ ಇರುತ್ತದೆ. ಇನ್ನೂ ಕಾರ್ಯಕ್ರಮ ಲೈವ್ ಮುಖಾಂತರ ನಡೆಯುತ್ತದೆ. ಎಲ್ಲ ಸದಸ್ಯರೂ ವೀಕ್ಷಿಸಬಹುದು.

ಹೆಚ್ಚಿನ ವಿವರಗಳಿಗೆ ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ (9810882498) ಮತ್ತು ಸಂಘದ ಕಚೇರಿಯನ್ನು ಸಂಪರ್ಕಿಸಿ : 26109615

ಸಿ ಎಂ ನಾಗರಾಜ
ಪ್ರಧಾನ ಕಾರ್ಯದರ್ಶಿ



## ವಿಶೇಷ ಪ್ರಕಟಣೆ



ದೆಹಲಿ ಕರ್ನಾಟಕ ಸಂಘವು ಸದ್ಯದಲ್ಲೇ ಸಂಘದ ಆಜೀವ ಸದಸ್ಯರ ಡೈರೆಕ್ಟರಿಯನ್ನು ಪ್ರಕಟಿಸುವ ಯೋಜನೆ ಹಮ್ಮಿಕೊಂಡಿದೆ. ದೆಹಲಿ ಮತ್ತು ಎನ್.ಸಿ.ಆರ್. ಪ್ರದೇಶದಲ್ಲಿರುವ ಸಂಘದ ಸದಸ್ಯರು ತಮ್ಮ ಬದಲಾಗಿರಬಹುದಾದ ಈಗಿನ ವಿಳಾಸ, ಹುದ್ದೆ, ದೂರವಾಣಿ ಸಂಖ್ಯೆ, ಹುಟ್ಟೂರು, ಮತ್ತು ಇಮೇಲ್ ವಿವರಗಳನ್ನು 20.11.2020ರ ಒಳಗಾಗಿ dksangha@gmail.com ಗೆ ಕಳುಹಿಸಬೇಕಾಗಿ ವಿನಂತಿ.

| | |
|---|---|
| **ಡಾ. ಅವನೀಂದ್ರನಾಥ್ ರಾವ್** | **ಸಿ.ಎಂ. ನಾಗರಾಜ** |
| ಉಪಾಧ್ಯಕ್ಷರು / ಸಂಪಾದಕ (ಡೈರೆಕ್ಟರಿ) | ಪ್ರಧಾನ ಕಾರ್ಯದರ್ಶಿ |
| 9868123382 | 9968074409 |



# ಕನ್ನಡಮ್ಮನ ಕೃಪೆಯಿಂದ ವಿಪತ್ತು ತೊಲಗಲಿ

**-ಡಾ. ವೆಂಕಟಾಚಲ ಹೆಗಡೆ**



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 01.11.2020ರಂದು ಕರ್ನಾಟಕ ರಾಜ್ಯೋತ್ಸವವನ್ನು ಸಡಗರದಿಂದ ಆಚರಿಸಲಾಯಿತು. ಕನ್ನಡ ಭುವನೇಶ್ವರಿಗೆ ಪೂಜೆ ಸಲ್ಲಿಸಿ ಧ್ವಜಾರೋಹಣ ನಡೆಸಿದ ನಂತರ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮಾತನಾಡಿ ಶುಭ ಹಾರೈಸಿದರು.

ನಮ್ಮ ನಾಡು ಅನೇಕ ಅಡೆತಡೆಗಳನ್ನು ಎದುರಿಸಿದರೂ ಎಂದಿನಂತೆ ಅಭಿವೃದ್ಧಿ ಪಥದಲ್ಲಿ ಸಾಗಲಿ. ಕನ್ನಡಿಗರು ಸುಖ, ಸಂತೋಷ ನೆಮ್ಮದಿಯಿಂದ ಬಾಳುವಂತಾಗಲಿ. ಕನ್ನಡಮ್ಮನ ಕೃಪೆಯಿಂದ ಈಗ ಎದುರಾಗಿರುವ ಕೋವಿಡ್-19 ನಂತಹ ವಿಪತ್ತು ತೊಲಗಲಿ ಎಂದವರು ಆಶಿಸಿದರು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಮಾತನಾಡಿ ತಾಯ್ನೆಲದ ಋಣ ತೀರಿಸಲಾಗದು. ದೈನಂದಿನ ಕೆಲಸಗಳ ನಡುವೆಯೂ ನಾವು ಕನ್ನಡದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ. ಈ ಮೂಲಕ ನಾಡು ನುಡಿಗೆ ದೇಣಿಗೆ ಸಲ್ಲಿಸುವಂತಾಗಲಿ ಎಂಬ ಆಶಯ ವ್ಯಕ್ತಪಡಿಸಿದರು.

ಕೋವಿಡ್ ಕಾರಣದಿಂದ ವರ್ಷ 2020 ನಮಗೆ ಹಿನ್ನಡೆ ತಂದಿರಬಹುದು. ಆದರೆ ಕನ್ನಡಕ್ಕಾಗಿ ತುಡಿಯುವ ಮನಸ್ಸು ಸದಾ ಇರಲಿ ಎಂದು ಕಾರ್ಯಕಾರಿ ಸಮಿತಿ ಸದಸ್ಯ ಎನ್.ಆರ್. ಶ್ರೀನಾಥ್ ಹಾರೈಸಿ ವಂದಿಸಿದರು.

ಕಾರ್ಯಕಾರಿ ಸಮಿತಿ ಸದಸ್ಯ ಶಿವಪ್ಪ ಎಂ., ಕಲಾವಿದ ಸುಧೀರ್ ಫಡ್ನೀಸ್, ಹಿರಿಯ ಕನ್ನಡಿಗ ಮೂರ್ತಿ ಕೆ.ಎಸ್., ಐಟಿಬಿಪಿಯ ಜಕ್ಕಪ್ಪ, ಶ್ರೀಮತಿ ಪದ್ಮಿನಿ ಶ್ರೀನಾಥ್ ಮೊದಲಾದವರು ಭಾಗವಹಿಸಿದರು.

***ಶಿವಪ್ಪ ಎಂ.***

# ಕರ್ನಾಟಕ ಭವನದಲ್ಲಿ 65ನೇ ಕರ್ನಾಟಕ ರಾಜ್ಯೋತ್ಸವ

ಕರ್ನಾಟಕ ಭವನ-2ರ ಶರಾವತಿಯಲ್ಲಿ 65ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಕೋವಿಡ್-19ರ ಹಿನ್ನೆಲೆಯಲ್ಲಿ ದಿನಾಂಕ 01.11.2020ರಂದು ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್ ಅವರು ಭುವನೇಶ್ವರಿ ದೇವಿ ಪೂಜೆ ಮಾಡಿ ಧ್ವಜಾರೋಹಣ ನೆರವೇರಿಸಿದರು.

ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ವಿಶ್ವನಾಥ ಅವರು ಮಾತನಾಡುತ್ತಾ, ಕನ್ನಡವು ಸೇವಂತಿ, ಸಂಪಿಗೆ, ಅರಳು ಮಲ್ಲಿಗೆಯ ಸುವಾಸನೆ ಬೀರುವಂತಹ ಭಾಷೆ ಎಂದರು. 10ನೇ ಶತಮಾನದಲ್ಲಿ ಕಾವ್ಯ ಸೃಷ್ಟಿಯಾಯ್ತು. ಹಳಗನ್ನಡ, ಸಂಸ್ಕೃತ ಭಾಷೆಗಳಲ್ಲಿ ಕಾವ್ಯ ಬರೆಯುವ ರೂಢಿಯಿತ್ತು.

ಶ್ರೀವಿಜಯನ ಕವಿರಾಜ ಮಾರ್ಗದಲ್ಲಿ 'ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ ಕನ್ನಡದೊಳ್' ಕನ್ನಡ ಭಾಷೆ, ಸಂಸ್ಕೃತಿ ಹಲವು ವಿಷಯಗಳ ವಿವರ ಇದೆ ಎಂದರು. ಆದಿಕವಿ ಪಂಪ ಕನ್ನಡ ನಾಡಿನ ಕುರಿತು ಹೇಳಿರುವುದನ್ನು ಉಲ್ಲೇಖಿಸಿದರು. ಇಡೀ ಮಾನವ ಕುಟುಂಬ ಒಂದೇ ಆಗಿದೆ. ಮಾತು ಯಾರಿಗೂ ನೋವನ್ನು ಕೊಡುವಂತದ್ದಾಗಿರಬಾರದು. ನುಡಿದರೆ ಮುತ್ತಿನ ಹಾರದಂತಿರಬೇಕು ಎಂದು 12ನೇ ಶತಮಾನದ ವಚನಕಾರರು ವಚನಗಳ ಮೂಲಕ ಸಾರಿದರು. ಕೀರ್ತನಕಾರರು ಸರಳವಾಗಿ ಅನುಭವದ ಮೂಲಕ ಹಾಡುಗಳನ್ನು ರಚಿಸಿ ಹಾಡಿದರು ಎಂದ ಅವರು, ಐದನೇ ಶತಮಾನದಲ್ಲಿ ದೊರೆತ ಹಲ್ಮಿಡಿ ಶಾಸನದಲ್ಲಿಯೇ ಕನ್ನಡದ ಶ್ರೀಮಂತ ಸಂಸ್ಕೃತಿ ಬಗ್ಗೆ ಉಲ್ಲೇಖವಿದೆ ಎಂದು ಹೇಳಿದರು.



ಆಧುನಿಕ ಕಾಲದವರೆಗೂ ಕನ್ನಡ ಸಾಹಿತ್ಯ, ಶಬ್ದ ಸಂಸ್ಕೃತಿ ಬೆಳೆದು ಬಂದಿರುವ ಕುರಿತು, ಸರ್ವಜ್ಞ ಕವಿಯ ಕುರಿತು ಅವರು ಮಾತನಾಡಿದರು. ಕನ್ನಡ ನಾಡು ನುಡಿಗೆ ಕನ್ನಡ ಸಾಹಿತ್ಯಕ್ಕೆ ಸರಳ ಅನುಭವದ ಮೂಲಕ ಸರ್ವಜ್ಞ ಕಟ್ಟಿಕೊಟ್ಟಿರುವ ಸಾಹಿತ್ಯ ಅದ್ಭುತ ಎಂದರು.

'ಜಯ ಭಾರತ ಜನನಿಯ ತನುಜಾತೆ' ನಾಡಗೀತೆಯು ಕುರಿತಾಗಿ ಹೇಳಿದರು. ಸೌಹಾರ್ದ, ಶಾಂತಿ, ಜ್ಞಾನ, ತಿಳುವಳಿಕೆ ಇವೆಲ್ಲವನ್ನೊಳಗೊಳ್ಳುವದೇ ಕನ್ನಡ, ಕನ್ನಡ ನುಡಿ, ಕರ್ನಾಟದ ಸಂಸ್ಕೃತಿ ಎಂದು ಡಾ. ವಿಶ್ವನಾಥ ಅವರು ಸವಿಸ್ತಾರವಾಗಿ ಮಾತನಾಡಿದರು.

ನವದೆಹಲಿಯ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತ ಎಚ್. ಪ್ರಸನ್ನ ಅವರು ಮಾತನಾಡುತ್ತಾ, ಕೋವಿಡ್-19ರ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಸರಳ ಸಮಾರಂಭ ಆಯೋಜಿಸುವ ಮೂಲಕ ಮೆರುಗು ನೀಡಿದ ಅರ್ಥಪೂರ್ಣ ಕಾರ್ಯಕ್ರಮ ಎಂದರು. ಧ್ವಜ ವಂದನೆ ನೀಡಿರುವ ಕೆ.ಎಸ್.ಆರ್.ಪಿ. ಪಡೆಯ ಬಸವರಾಜ ಗುರವ್ ಅವರ ತಂಡ ಹಾಗೂ ಒಟ್ಟಾರೆ ಈ ಕಾರ್ಯಕ್ರಮದ ಯಶಸ್ವಿಗೆ ಕಾರಣೀಕರ್ತರಾದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಬಳ್ಳಾರಿ ಸಂಸದ ವೈ. ದೇವೆಂದ್ರಪ್ಪ, ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತರಾದ ಮೀರಾ ಶ್ರೀವಾತ್ಸವ, ಸಂಸದರ ಕೋಶ ವಿಭಾಗದ ಉಪ ನಿವಾಸಿ ಆಯುಕ್ತ ಬಿ.ವಿ. ವಿಠ್ಠಲ್ ಹಾಗೂ ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

**ಅಮರೇಶ್**

**ಅಭಿನಂದನೆ**

# ಫೋಟೋಗ್ರಫಿ ಸ್ಪರ್ಧೆಯಲ್ಲಿ ಆದಿತ್ಯಗೆ ಪ್ರಥಮ ಬಹುಮಾನ

ಅಂತರರಾಜ್ಯ ಫೋಟೋಗ್ರಫಿ ಸ್ಪರ್ಧೆಯಲ್ಲಿ ಕನ್ನಡಿಗ, ಶಿರಸಿ ಸಮೀಪದ ಕಡವೆಯ ಆದಿತ್ಯ ಸತೀಶ ಹೆಗಡೆ ಪ್ರಥಮ ಬಹುಮಾನ ಪಡೆದಿದ್ದಾನೆ.

ದೆಹಲಿಯ ಎವರ್‌ಗ್ರೀನ್ ಪಬ್ಲಿಕ್ ಸ್ಕೂಲ್ ಹತ್ತನೇ ತರಗತಿ ವಿದ್ಯಾರ್ಥಿ ಆದಿತ್ಯ ಪ್ರಶಸ್ತಿಯೊಂದಿಗೆ 2000 ರೂಪಾಯಿ ನಗದು, ಪ್ರಶಸ್ತಿಪತ್ರ ಪಡೆದುಕೊಂಡಿದ್ದಾನೆ.

ಕೋವಿಡ್ ಕಾರಣದಿಂದ ಆನ್‌ಲೈನ್‌ನಲ್ಲಿ ಸ್ಪರ್ಧೆ ಏರ್ಪಟ್ಟಿತ್ತು. 50 ಶಾಲೆಗಳಿಂದ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದು ಉತ್ತರ ಭಾರತದ ಅಂತರರಾಜ್ಯ ಸ್ಪರ್ಧೆಯಾಗಿದ್ದು ಬನಾರಸ್ ಮತ್ತು ಪಂಜಾಬ್ ವಿದ್ಯಾರ್ಥಿಗಳು ದ್ವಿತೀಯ, ತೃತೀಯ ಸ್ಥಾನ ಪಡೆದಿದ್ದಾರೆ.

ಆದಿತ್ಯ ಹೆಗಡೆ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಹಾಗೂ ದೆಹಲಿಯ ಗೋಕರ್ಣ ಮಂಡಳದ ಕಾರ್ಯದರ್ಶಿ ಸತೀಶ್ ಹೆಗಡೆ ಅವರ ಪುತ್ರ.

ಆದಿತ್ಯ ಹೆಗಡೆ ಸಾಧನೆಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.



## ಕೃತಿ ಸಮೀಕ್ಷೆ

# ಡಾ. ಅವನೀಂದ್ರರ 'ದೆಹಲಿಯ ಕನ್ನಡ ಜಗತ್ತಿನಲ್ಲಿ'

*ದೆಹಲಿಯ ಕನ್ನಡಿಗರ ಕುರಿತ ಮೊದಲ ಸಂಸ್ಕೃತಿ ಕಥನ 'ದೆಹಲಿಯ ಕನ್ನಡ ಜಗತ್ತಿನಲ್ಲಿ'. ಈ ಕೃತಿಯ ಕುರಿತು ಕನ್ನಡದ ಹಿರಿಯ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಬರೆದ ಮುನ್ನುಡಿ ಬರಹ ಇಲ್ಲಿದೆ*


**–ಸಂಪಾದಕ**

ಅವನೀಂದ್ರನಾಥ್ ಅವರನ್ನು ನಾನು ಕಳೆದ ಒಂದು ದಶಕದಿಂದ ಬಲ್ಲೆ. ಸೂಕ್ಷ್ಮ ಮನಸ್ಸಿನ ಸಂವೇದನಾಶೀಲ ವ್ಯಕ್ತಿಯಾದ ಅವರದು ಬಹುಮುಖ ಆಸಕ್ತಿ. ಸಾಹಿತ್ಯ, ರಂಗಭೂಮಿ, ಪುಸ್ತಕ ಸಂಸ್ಕೃತಿ, ಸಂಘಟನೆ, ಸಾಮಾಜಿಕ ಆಂದೋಲನ – ಹೀಗೆ ಹಲವು ಬಗೆಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕ್ರಿಯಾಶೀಲ ಚೇತನ.

ಒಳ್ಳೆಯ ಪ್ರಬಂಧಕಾರರು. ಕವಿತೆಗಳನ್ನೂ ಬರೆದಿದ್ದಾರೆ. ಅನೇಕ ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಸಮೂಹ ಮಾಧ್ಯಮ, ರಾಜಕೀಯ, ವಲಸೆ ಸಂಸ್ಕೃತಿ ಮೊದಲಾದ ವಿಷಯಗಳ ಬಗ್ಗೆ ಒಳನೋಟಗಳುಳ್ಳ ಲೇಖನಗಳನ್ನು ಬರೆದಿದ್ದಾರೆ. ಅನೇಕ ಉಪಯುಕ್ತ ಲೇಖನಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಅನೇಕ ಸಂಘಸಂಸ್ಥೆಗಳೊಂದಿಗೆ ನಿಕಟ ಒಡನಾಟವಿಟ್ಟುಕೊಂಡು ಸಮಾಜವನ್ನು ಚಲನಶೀಲವಾಗಿಡಲು ನಿರಂತರ ಶ್ರಮಿಸು ತ್ತಿದ್ದಾರೆ. ಇದೀಗ ಅವನೀಂದ್ರನಾಥ್ ಅವರ ಹೊಸ ಸಂಕಲನ "ದೆಹಲಿಯ ಕನ್ನಡ ಜಗತ್ತಿನಲ್ಲಿ" ಪ್ರಕಟವಾಗುತ್ತಿದೆ.

ಕನ್ನಡ ಸಂಸ್ಕೃತಿಗೆ ಎರಡು ನೆಲೆಗಳಿವೆ. ಕರ್ನಾಟಕದ ಒಳಗೆ ನಡೆಯುತ್ತಿರುವ ಚಟುವಟಿಕೆಗಳು ಒಂದು ನೆಲೆಯಾದರೆ, ಕರ್ನಾಟಕದ ಆಚೆ ಕನ್ನಡ ಸಂಸ್ಕೃತಿ ಕಟ್ಟುತ್ತಿರುವ ಒಂದು ದೊಡ್ಡ ಪಡೆಯೇ ಇದೆ ; ಅದು ಇನ್ನೊಂದು ನೆಲೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಾಚೆ ಕನ್ನಡ ಸಂಸ್ಕೃತಿ ಹೆಚ್ಚು ಕ್ರಿಯಾಶೀಲವಾಗಿದೆ. ದೆಹಲಿಯ ಕನ್ನಡ ಜಗತ್ತು ಅಂತಹ ಒಂದು ಕೇಂದ್ರ. ವೃತ್ತಿಕಾರಣದಿಂದಾಗಿ ಕರ್ನಾಟಕದಿಂದ ದೂರ ಇರಬೇಕಾದ ಅನೇಕ ಕನ್ನಡಿಗರಿಗೆ ಕನ್ನಡವೆಂಬುದು ಭಾವನಾತ್ಮಕ ಅಗತ್ಯ ಮಾತ್ರವಲ್ಲ, ತಮ್ಮನ್ನು ಸೃಜನಶೀಲವಾಗಿಟ್ಟುಕೊಳ್ಳುವ, ಜೀವಂತವಾಗಿಟ್ಟುಕೊಳ್ಳುವ ಕ್ರಮವೂ ಹೌದು. ಅವನೀಂದ್ರನಾಥರಾವ್ ಕಳೆದ ಕೆಲವು ವರ್ಷಗಳಿಂದ ದೆಹಲಿಯ ಕನ್ನಡ ಜಗತ್ತಿನ ಒಂದು ಭಾಗವಾಗಿದ್ದಾರೆ. ಅವರು ಹೇಳುತ್ತಾರೆ: "ಕಳೆದ ಹದಿಮೂರು ವರ್ಷಗಳಲ್ಲಿ ನಾನು ದೆಹಲಿಯ ಕನ್ನಡ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಘಟನೆಗಳಿಗೆ ಮುಖಾಮುಖಿಯಾದಾಗ ಮೂಡಿಬಂದ ಬರಹಗಳು ಇಲ್ಲಿ ಕೃತಿರೂಪ ತಾಳಿವೆ. ಇಲ್ಲಿನ ಕನ್ನಡ ಜಗತ್ತಿನೊಂದಿಗೆ ನನ್ನ ನಿರಂತರ ಸಂಪರ್ಕ ಮತ್ತು ಒಡನಾಟ ಹೀಗೆ ಬರೆಯಲು ಪ್ರೇರಣೆ ಮತ್ತು ಅವಕಾಶ ನೀಡಿದೆ. ಈ ಬಗೆಯ ಭಾಗವಹಿಸುವಿಕೆ ಮತ್ತು ಚಟುವಟಿಕೆ ನನ್ನ ಬದುಕಿಗೆ ಜೀವಂತಿಕೆ ಹಾಗೂ ಸಂತೋಷವನ್ನು ನೀಡಿದೆ."

ಇಲ್ಲಿ ಎರಡು ಸಂಗತಿಗಳು ನನ್ನ ಗಮನ ಸೆಳೆದವು. ಒಂದು ಪಾಲ್ಗೊಳ್ಳುವಿಕೆ ಮತ್ತೊಂದು ಜೀವಂತಿಕೆ. ಅವನೀಂದ್ರರು ದೆಹಲಿಯ ಕನ್ನಡ ಜಗತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಆ ಮೂಲಕ ತಮ್ಮ ಬದುಕಿನ ಜೀವಂತಿಕೆಯನ್ನು ಕಾಪಾಡಿಕೊಂಡಿದ್ದಾರೆ. ಏಕತಾನತೆಯ ನಗರ ಬದುಕಿನಲ್ಲಿ ಜೀವನೋತ್ಸಾಹ ಉಳಿಸಿಕೊಳ್ಳುವುದು ನಿಜಕ್ಕೂ ಒಂದು ಸವಾಲು. ರಾವ್ ಈ ಸವಾಲನ್ನು ಸಂಸ್ಕೃತಿ ಚಟುವಟಿಕೆಗಳ ಮೂಲಕ ಎದುರಿಸಿದ್ದಾರೆ. ಅವರ ಇಲ್ಲಿನ ಬರಹಗಳ ಸ್ವರೂಪವನ್ನು ಇದೇ ರೂಪಿಸಿದಂತೆ ತೋರುತ್ತದೆ.




| | | |
|---|---|---|
| **ಲೇಖಕ** | : | **ಡಾ. ಅವನೀಂದ್ರನಾಥ್ ರಾವ್** |
| **ವರ್ಷ** | : | **2016.** |
| **ಬೆಲೆ** | : | **100/-** |

'ದೆಹಲಿಯ ಕನ್ನಡ ಜಗತ್ತಿನಲ್ಲಿ' ಕೃತಿಯಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ವ್ಯಕ್ತಿಚಿತ್ರಗಳಿದ್ದು, ಎರಡನೆಯ ಭಾಗದಲ್ಲಿ ವಿಶ್ಲೇಷಣಾತ್ಮಕ ಬರಹಗಳಿವೆ. ಇಲ್ಲಿರುವ ವ್ಯಕ್ತಿಚಿತ್ರಗಳು ರೇಖಾಚಿತ್ರದ ಮಾದರಿಯವು. ಕೆಲವು ಮಾತುಗಳಲ್ಲಿ ಅವನೀಂದ್ರನಾಥರು ತಾವು ಹತ್ತಿರದಿಂದ ಕಂಡ, ತಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳ ವ್ಯಕ್ತಿತ್ವವನ್ನು ಆಪ್ತವಾಗಿ, ಪರಿಣಾಮಕಾರಿಯಾಗಿ ಚಿತ್ರಿಸುತ್ತಾರೆ. ಈ ಚಿತ್ರಗಳಲ್ಲಿ ಸಾಹಿತ್ಯವಲಯದ ಯು. ಆರ್. ಅನಂತಮೂರ್ತಿ, ಸಿದ್ಧಲಿಂಗಪಟ್ಟಣಶೆಟ್ಟಿ, ಲಿಂಗದೇವರು, ಬಿಳಿಮಲೆ, ಶಿವಪ್ರಕಾಶ, ಅಗ್ರಹಾರ ಮೊದಲಾದವರ ಪರಿಚಯವಿದೆ. ಇಲ್ಲಿನ ಕೆಲವು ವಿವರಗಳು ನಮಗೆ ಪರಿಚಿತವಾದಂಥವು. ಆದರೆ ಅವನೀಂದ್ರರು ಕಟ್ಟಿಕೊಡುವ ಬೇರೆ ಬೇರೆ ಕ್ಷೇತ್ರಗಳ ವ್ಯಕ್ತಿಗಳ ಚಿತ್ರಗಳು ನಮ್ಮ ಮನಸ್ಸನ್ನು ಆವರಿಸಿ ನಿಲ್ಲುತ್ತವೆ. ಸರೋಜಿನಿಮಹಿಷಿ, ರಾಮಮೋಹನರಾವ್, ಸಿ.ವಿ. ಗೋಪಿನಾಥ್, ಬೆಂಗೇರಿ, ಶಿವರಾಮಯ್ಯ, ಸಾಮಗ , ಕೃಷ್ಣಪ್ರಸಾದ್, ಮಹಾದೇವಪ್ಪ, ಉಪಾಧ್ಯಾಯ, ಪ್ರಭಾಕರ ರಾವ್, ಬಿರಾದಾರ ಮೊದಲಾದವರ ಬಗ್ಗೆ ಅವನೀಂದ್ರರು ಅನೇಕ ಉಪಯುಕ್ತ ಮಾಹಿತಿಗಳನ್ನು ನೀಡುತ್ತಾರೆ. ಇವರೆಲ್ಲರೂ ದೆಹಲಿಯ ಕನ್ನಡ ಬದುಕಿನಲ್ಲಿ ಒಂದಲ್ಲ ಒಂದು ರೀತಿ ಬೆಸೆದುಕೊಂಡವರು. ಸದ್ದಿಲ್ಲದೇ ಕನ್ನಡ ಸಂಸ್ಕೃತಿಯನ್ನು ರಾಜಧಾನಿಯಲ್ಲಿ ಕಟ್ಟಿದವರು. ತಾಂಬೂಲ ತಹಸೀಲ್ದಾರರಾದ ಕೃಷ್ಣಪ್ರಸಾದರ ಬಗೆಗಿನ ಲೇಖನ ವ್ಯಕ್ತಿತ್ವವನ್ನು ಅವನೀಂದ್ರರು ಹಿಡಿಯುವ ಪರಿಗೆ ಒಂದು ಮಾದರಿಯಂತಿದೆ. ಸಾಮಾನ್ಯವಾಗಿ ಅಧಿಕಾರಿಗಳೆಂದರೆ ದರ್ಪದ ಚಿತ್ರವೊಂದು ನಮ್ಮ ಮನಸ್ಸಿನಲ್ಲಿ ಮೂಡುವುದು ಸಹಜ. ನಮ್ಮ ಗ್ರಾಮೀಣ ಭಾಗದಲ್ಲಿ ವೀಳ್ಯಕ್ಕೆ ಅತ್ಯಂತ ಮಹತ್ವವಿದೆ. ವೀಳ್ಯಶಾಸ್ತ್ರವೆಂಬ ಆಚರಣೆಯೇ ರೂಢಿಯಲ್ಲಿದೆ. ವೀಳ್ಯ ಒಂದು ರೀತಿಯ ಗೌರವಾನ್ವಿತ ಒಪ್ಪಂದ. ಇದನ್ನು ಆಡಳಿತದಲ್ಲಿ ಕೃಷ್ಣಪ್ರಸಾದ್ ಬಳಸಿಕೊಂಡ ರೀತಿ ನನಗೆ ಅನೇಕ ಕಾರಣ ಗಳಿಂದ ಮುಖ್ಯವೆನಿಸಿತು. ನಮ್ಮ ಪರಂಪರೆ, ಸಂಪ್ರದಾಯವನ್ನು ಆಧುನಿಕ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯ ಎಂಬುದನ್ನು ಇದು ತೋರಿಸುತ್ತದೆ. ಅಲ್ಲದೆ ಆಡಳಿತವೆಂದರೆ ಅಧಿಕಾರ ದರ್ಪ ದಬ್ಬಾಳಿಕೆ ಮಾತ್ರವಲ್ಲ ಅದೊಂದು ಗೌರವಾನ್ವಿತ ವ್ಯವಹಾರ ಎಂಬುದನ್ನೂ ಇದು ಸೂಚಿಸುತ್ತದೆ. ಜೊತೆಗೆ ಇದು ಎದುರಿಗಿರುವವರ ಜೊತೆ ಸಂಬಂಧ ಸೃಷ್ಟಿಸಿಕೊಳ್ಳುವ ಕ್ರಮವೂ ಹೌದು. ಪರಂಪರೆಯ

ಆಧುನಿಕ ಅನುಸಂಧಾನದ ಈ ಮಾದರಿ ನಮ್ಮನ್ನು ಬೇರೆ ಬೇರೆ ನೆಲೆಗಳಲ್ಲಿ ಚಿಂತಿಸುವಂತೆ ಮಾಡುತ್ತದೆ. ಕಂದಾಯ ವಸೂಲಿಯ ದಾಖಲೆಯ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಆದರೆ ಅದಷ್ಟೇ ಇಲ್ಲಿ ಮುಖ್ಯವಲ್ಲ. ಇಂಥ ಅನೇಕ ಸೂಕ್ಷ್ಮಗಳು ಅವನೀಂದ್ರರ ಬರವಣಿಗೆಯಲ್ಲಿದೆ.

ಅವನೀಂದ್ರನಾಥ್ ಮೂಲತಃ ಸಾಹಿತ್ಯದ ವಿದ್ಯಾರ್ಥಿ. ಅಧ್ಯಯನಶೀಲರು. ಹೀಗಾಗಿ ತಾವು ಓದಿದ ಕೃತಿಗಳಿಗೆ ಇಲ್ಲಿ ಸ್ಪಂದಿಸಿದ್ದಾರೆ. ಹಾಗೆಯೇ ಸಾಂಸ್ಕೃತಿಕ ಘಟನೆಗಳಿಗೆ ಪ್ರತಿಕ್ರಿಯಿಸಿದ್ದಾರೆ. ಕಂಬಾರರ ಸಾಂಬಶಿವ, ಸರಜೂ ಅವರ ಅಂಬೆ, ರಾಮಮೋಹನರಾವ್ ಅವರ ನಾನು ಕಂಡ ನನ್ನ ದೇಶ, ಕುಲಕರ್ಣಿಯವರ ಸಾವಿತ್ರಿ, ಕೊಲ್ಹಾರರ ನಾ ಸತ್ತಿಲ್ಲ, ಕಲುಮಂಗಿಯವರ ಮದುವೆ ತಂದ ಮೋ(ಗೋ)ಜು, ಬೆಳ್ಳಾರೆಯವರ ಕಥೆಗಳ ಬಗ್ಗೆ ಅವನೀಂದ್ರರು ವಿಶ್ಲೇಷಣಾತ್ಮಕವಾಗಿ ಬರೆದಿದ್ದಾರೆ. ಇಂಥ ಪರಿಚಯಾತ್ಮಕ ಲೇಖನಗಳು ಸಾಂಸ್ಕೃತಿಕ ಪರಿಸರವನ್ನು ನಿರ್ಮಿಸುವಲ್ಲಿ ಅತ್ಯಗತ್ಯ. ಸೃಜನಶೀಲತೆಯನ್ನು ಪೋಷಿಸುವ ಬರಹಗಳ ಕೊರತೆ ಇಂದಿನ ಸಮಸ್ಯೆಗಳಲ್ಲೊಂದು. 'ದೆಹಲಿ ಕರ್ನಾಟಕ ಸಂಘ – ಒಂದು ಐತಿಹಾಸಿಕ ನೋಟ' ಒಂದು ಉತ್ತಮ ದಾಖಲೆ. ಭಾರತೀಯರಲ್ಲಿ ಐತಿಹಾಸಿಕ ಪ್ರಜ್ಞೆಗಿಂತ ಪುರಾಣಪ್ರಜ್ಞೆ ಪ್ರಧಾನ. ಹೀಗಾಗಿ ಅನೇಕ ವೇಳೆ ಒಂದು ಸಂಸ್ಕೃತಿ ಕಟ್ಟುವಲ್ಲಿ ತಮ್ಮ ಬದುಕನ್ನು ತೊಡಗಿಸಿಕೊಂಡ ಅನೇಕ ವ್ಯಕ್ತಿತ್ವಗಳ ಮಾಹಿತಿಗಳೇ ಮರೆಯಾಗಿಬಿಡುತ್ತವೆ. ಪ್ರಚಾರಪ್ರಿಯ ಮಂದಿ ಪ್ರಾಮುಖ್ಯತೆ ಪಡೆದುಕೊಂಡು ಬಿಡುತ್ತಾರೆ. ಇದು ಇತಿಹಾಸಕ್ಕೆ ಮಾಡುವ ಅಪಚಾರ. ಇಂಥ ಲೇಖನಗಳು ಅಂಥ ಕೊರತೆಯನ್ನು ತುಂಬುತ್ತವೆ.

ಅವನೀಂದ್ರರಿಗೆ ಬರವಣಿಗೆ ತಮ್ಮನ್ನು ಕ್ರಿಯಾಶೀಲವಾಗಿಟ್ಟುಕೊಳ್ಳಲು ಇರುವ ಮಾಧ್ಯಮ. ಹೀಗಾಗಿ ಅವರ ಬರವಣಿಗೆ ತೋರುಗಾಣಿಕೆಯಿಂದ ಪಾರಾಗಿದೆ. ಇದು ಅವರ ಶಕ್ತಿ. ದೆಹಲಿಯ ಕನ್ನಡ ಜಗತ್ತಿನ ಮತ್ತಷ್ಟು ಮುಖಗಳು ಅನಾವರಣಗೊಳ್ಳಲಿ, ಆ ಮೂಲಕ ಕನ್ನಡ ಸಂಸ್ಕೃತಿ ಸಮೃದ್ಧಗೊಳ್ಳಲಿ ಎಂದು ಆಶಿಸುತ್ತೇನೆ.

***ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ***
(ಮುನ್ನುಡಿಯಿಂದ)

# ಪ್ರಗತಿಶೀಲ ಪಂಥರ ಏಕೈಕ ವಕ್ತಾರ ನಿರಂಜನ


ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಕಲನ 'ನಿರಂಜನ ಕೃತಿ ಸ್ಮೃತಿ : ನಿರಂಜನ ನೀಲಾಂಜನ' ಸಂಘ 2017ರಲ್ಲಿ ಇದನ್ನು ಪ್ರಕಟಿಸಿದೆ. ಈ ಕೃತಿಗೆ ಹಿರಿಯ ಸಾಹಿತಿ ಡಾ. ಎಸ್.ಜಿ. ಸಿದ್ಧರಾಮಯ್ಯ ಬರೆದ ಆಶಯ ನುಡಿಗಳು ಇಲ್ಲಿವೆ.

**–ಸಂಪಾದಕ**

ಆಧುನಿಕ ಕನ್ನಡ ಸಾಹಿತ್ಯಲೋಕವನ್ನು ಪ್ರಭಾವಿಸಿದ ಹಲವು ತತ್ವ ಸಿದ್ಧಾಂತಗಳ ಸಾಲಿನಲ್ಲಿ ಪ್ರಗತಿಶೀಲ ಪಂಥದ ತಾತ್ವಿಕ ವಿಚಾರಗಳು ಗಮನಾರ್ಹವಾದುವು. ನವೋದಯ ನವ್ಯಗಳ ಅಬ್ಬರದ ನಡುವೆ ಸದ್ದುಗದ್ದಲವಿದೆ ದನಿ ಮಾಡಿದ ಈ ಚಳವಳಿ ಬೆರಳೆಣಿಕೆಯಷ್ಟು ಪ್ರಮಾಣದಲ್ಲಿ ಸಾಹಿತಿಗಳನ್ನೂ ಪ್ರಭಾವಿಸಿದ್ದು ಸತ್ಯ ಸಂಗತಿ. ಅವರಲ್ಲಿ ಪ್ರಮುಖರಾದವರು ನಿರಂಜನ. ಇವರ ಜೊತೆಗೆ ಕಟ್ಟೀಮನಿ, ಅನಕೃ, ತರಾಸು ಮೊದಲಾದವರು ಸೇರಿದರೂ ಸ್ವಲ್ಪ ದೂರ ಹೋಗುವಷ್ಟರಲ್ಲಿ ಅವರ ದಾರಿ ದಿಕ್ಕು ಬದಲಿಸಿಕೊಂಡರು. ಆದರೆ ತಾವು ನಂಬಿದ ಸಿದ್ಧಾಂತಗಳಿಂದ ಸಾಮಾಜಿಕ ಚಿಂತನೆಗಳ ಬದ್ಧತೆಯಿಂದ ವಿಮುಖರಾಗದೆ ಸಾಗಿದವರು ನಿರಂಜನರೊಬ್ಬರೇ.

ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಪರಿಕಲ್ಪನೆಯ ಪ್ರಭಾವ ವ್ಯಾಪಕವಾಗಿ ಹಬ್ಬುತ್ತಿದ್ದಾಗಲೂ ವರ್ಗ ಸಂಘರ್ಷದ ಫಲರೂಪಿಯಾದ ಕಮ್ಯುನಿಸಂ ಸಿದ್ಧಾಂತಕ್ಕೆ ಆಕರ್ಷಿತರಾದ ನಿರಂಜನರು ಅದೇ ದಾರಿಯಲ್ಲಿ ಕೊನೆಯವರೆಗೂ ಬದುಕಿ ಬಾಳಿದವರು, ಅವರ ಚಿರಸ್ಮರಣೆ ಕನ್ನಡ ಸಾಹಿತ್ಯ ಜಗತ್ತಿನಲ್ಲಿ ಅಪರೂಪದ ಕೃತಿ. ಕೇರಳ ಕರ್ನಾಟಕದ ಗಡಿ ಭಾಗದಲ್ಲಿ ನಡೆದ ಹೋರಾಟದ ಅನುಭವಗಳನ್ನು ಚಿತ್ತವಾಗಿಸಿಕೊಂಡ ಈ ಕಾದಂಬರಿ ಸಮಾನತೆಯ ಆಳಯವನ್ನು ಬದುಕಿನಲ್ಲಿ ಆಗು ಮಾಡಲು ತೊಡಗಿದ ಹಲವು ಜೀವಗಳ ಜೀವನ ಕಥನವಾಗಿದೆ.

ಒಂದು ಕಾಲದಲ್ಲಿ ಘಟಿಸಿದ ಘಟನೆ ಕೇವಲ ಘಟನೆಯಾಗಿ ನಿರೂಪಿತವಾಗದೆ ಮನುಷ್ಯರ ಬದುಕಿನೊಳಗಿನ ಸ್ವಾರ್ಥ ದುರಾಸೆ ಅದಕ್ಕೆದುರಾಗಿ ಸಮಾನತೆ ತ್ಯಾಗ ಸಹಬಾಳ್ವೆಯ ಸಂತೋಷ ಸಂತೃಪ್ತಿಗಳ ಸಂಘರ್ಷಾತ್ಮಕ ಹೋರಾಟವಾಗಿ ಚಳವಳಿಯ ಸಂಕಥನವಾಗಿ ಮೂಡಿ ಬಂದಿದೆ. ಇಲ್ಲಿ ಸಿದ್ಧಾಂತವೆಂಬುದು ಹೇಳಿಕೆಯ ಘೋಷಣೆಯ ಭಾಷಣರೂಪಿಯಾಗಿ ನಿರೂಪಿತವಾಗಿಲ್ಲ. ಅನುಭವಗಳ ಫಲಿತದಲ್ಲಿ ಅರಗಿದ ಅನ್ನವಾಗಿದೆ. ಕೈಯ್ಯೂರಿನ ಸ್ಥಳೀಯತೆಯಲ್ಲಿ ಬೇರುಬಿಟ್ಟು ಲೋಕ ವಿಸ್ತಾರತೆಯ ವಿಚಾರಶೀಲತೆಯಲ್ಲಿ ಅರಳಿದೆ. ಯಾವುದೇ ಬರಹಕ್ಕೆ ಅನುಭವ ದ್ರವ್ಯ ಮೂಲ ಧಾತು. ಚಿರಸ್ಮರಣೆಯ ಮಹತ್ವಕ್ಕೆ ಈ ದ್ರವ್ಯಮೂಲ ಪ್ರಧಾನ ಕಾರಣ. ಕೇವಲ ಕಲ್ಪಿತ ಘಟನೆಗಳಲ್ಲಿ ತಾತ್ವಿಕ ನಿಲುವುಗಳನ್ನು ಕಟ್ಟ ಹೊರಟರೆ ಅದು ಮೂರು ಕಾಲ ಉಳಿಯದೆ ಹೋಗುತ್ತದೆ. ಚಿರಸ್ಮರಣೆ ರಚಿತವಾದ ಕಾಲ ಘಟ್ಟದಲ್ಲಿಯೇ ಬರೆದ ಈ ಪರಿಯ ಕಥೆ ಕಾದಂಬರಿಗಳು ಇನ್ನಿಲ್ಲದಂತೆ ಕಳೆದು ಹೋಗಿವೆ. ಆದರೆ ಚಿರಸ್ಮರಣೆ ಇಂದಿಗೂ ಚರ್ಚೆಗೆ ಗ್ರಾಸವಾಗಿರುವ ಮಹತ್ವದ ಕಾದಂಬರಿ. ಕನ್ನಡದ ನೆಲದಲ್ಲಿ ಮೈತಾಳಿದ ಪ್ರತಿಯೊಂದು ಚಳವಳಿಯ ಸಂದರ್ಭದಲ್ಲೂ ಚಳುವಳಿಯ ಆಶಯ ಬದ್ಧತೆಯನ್ನು ಬರೆ ಹಚ್ಚುವುದಕ್ಕೆ ಮುಖಾಮುಖಿಯಾಗಿ ನಿಲ್ಲುವ ಕಾದಂಬರಿ ಚಿರಸ್ಮರಣೆ. ಇದಕ್ಕೆ ಮುಖ್ಯ ಕಾರಣ ನಿರಂಜನರು ಬರಿದೆ ಬರೆಯಲಿಲ್ಲ ಬದುಕಿ ಬರೆದರು. ಹೋರಾಟವೆಂಬುದು ಬದುಕಿನ ಅಗತ್ಯವಾಗಿ ಹುಟ್ಟಿಕೊಂಡಿದ್ದು. ಸೋಲರಿಯದ ಭಾವದಲ್ಲಿ ಮುನ್ನಡೆಸಿದ್ದು. ಹೀಗಾಗಿ ನಿರಂಜನರಿಗೆ ಬರೆಯುವುದೆಂದರೆ ಬದುಕುವುದು ಎಂದೇ ಅರ್ಥ.





**(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)**
**ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ**
**ವರ್ಷ : 2017. ಬೆಲೆ : 200/-**

ನಿರಂಜನರ ಕುರಿತು ಇಂತಹ ಒಂದು ಪ್ರಮುಖ ಹೊತ್ತಿಗೆಯನ್ನು ಹೊರತಂದ ದೆಹಲಿ ಕರ್ನಾಟಕ ಸಂಘ ಹಾಗೂ ಹೊರತರಲು ಕಾರಣೀಭೂತರಾದ ಕೃತಿಯ ಸಂಪಾದಕ ವಸಂತ ಶೆಟ್ಟಿ ಬೆಳ್ಳಾರೆ ಅವರ ಶ್ರಮ ಸ್ತುತ್ಯಾರ್ಹ.

***ಡಾ. ಎಸ್.ಜಿ. ಸಿದ್ಧರಾಮಯ್ಯ***

# 'ಚಾಚಾ' ನೆಹರೂ

"ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ನಮ್ಮೆಲ್ಲರ ತಂದೆ ಸಮಾನ. ನೆಹರೂ ಅವರು ಮಹಾತ್ಮಾ ಗಾಂಧಿಯವರಿಗೆ ಸಹೋದರನಂತಿದ್ದರು. ಈ ಕಾರಣದಿಂದಾಗಿ ಅವರಿಗೆ ಮಕ್ಕಳೆಲ್ಲರೂ ಚಾಚಾ ನೆಹರೂ ಅಂತ ಕರೆಯುವುದಕ್ಕೆ ಪ್ರಾರಂಭಿಸಿದರು"



ಮಕ್ಕಳೇ, ನೀವು ದಾರಿಯಲ್ಲಿ ಹೋಗುವಾಗ ಅಲ್ಲಲ್ಲಿ ಕೆಲವು ಮಕ್ಕಳು ಭಿಕ್ಷೆ ಬೇಡ್ತಾ ನಿಂತಿರೋದನ್ನ ನೀವು ನೋಡಿರ್ತೀರಾ. ಕೆಲವು ಕಡೆ ವಾಹನ ತೊಳೆಯುವಂಥ ಕೆಲಸ ಮಾಡ್ತಿರೋ ಮಕ್ಕಳನ್ನೂ ನೋಡಿರಬಹುದು ನೀವು ಅಲ್ವಾ? ಅವರನ್ನೆಲ್ಲಾ ನೋಡಿದಾಗ ಎಷ್ಟು ಸಂಕಟ ಆಗತ್ತೆ ಅಲ್ವಾ? ದೇಶದ ಭವಿಷ್ಯವೇ ಭಿಕ್ಷೆ ಬೇಡ್ತಾ ನಿಂತಿದೆಯೇನೋ ಅಂತ ಅನಿಸೋದ್ರಲ್ಲಿ ಉತ್ಪ್ರೇಕ್ಷೆಯಿಲ್ಲ. ಮುಂದೊಂದು ದಿನ ಶಿಕ್ಷಕನೋ, ಸಾಹಿತಿಯೋ, ಕವಿಯೋ, ರೈತನೋ, ಉದ್ಯಮಿಯೋ, ಇಂಜಿನಿಯರೋ, ಡಾಕ್ಟರೋ, ವಿಜ್ಞಾನಿಯೋ ಆಗಿ ಈ ಮಣ್ಣಿನ ಋಣ ತೀರಿಸಬೇಕಾದ ಮಗುವೊಂದು ತನ್ನ ಸಧ್ಯದ ಸ್ಥಿತಿಗೆ ನೀವೆಲ್ಲರೂ ಜವಾಬ್ದಾರರು ಅಂತ ಪರೋಕ್ಷವಾಗಿ ನಮ್ಮೆಲ್ಲರ ಕಡೆಗೆ ಬೆಟ್ಟು ತೋರಿಸುತ್ತಾ ನಮ್ಮೆಲ್ಲರ ಮೇಲೆ ಸಾಮಾಜಿಕ ಋಣವನ್ನು ಹೊರಿಸುತ್ತ ನಿಂತಿರುವುದು ಎಂಥ ಶೋಚನೀಯ ವಿಷಯ ಅಲ್ಲವೇ?

ಜಗತ್ತಿನಲ್ಲಿ ಅನೇಕ ರೀತಿಯ ದಿನಾಚರಣೆಗಳು ನಡೆಯುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಅವೆಲ್ಲವುಗಳ ನಡುವೆ ನಿಮ್ಮೆಲ್ಲರ ಹೆಸರಿನಲ್ಲೂ ಒಂದು ದಿನ ಇದ್ದರೆ ಎಷ್ಟು ಚಂದ ಅಲ್ಲವೇ? ಹೂಂ, ನವೆಂಬರ್20 ಜಾಗತಿಕ ಮಕ್ಕಳ ದಿನ. ಹಾಗಾದರೆ ನಮ್ಮ ನವೆಂಬರ್ 14ರಂದೂ ನಾವು ಮಕ್ಕಳ ದಿನಾಚರಣೆಯನ್ನು ಮಾಡುತ್ತಿದ್ದೇವಲ್ಲ! ಹೌದು ನಿಮಗೆಲ್ಲರಿಗೂ ತಿಳಿದ ಹಾಗೆ ನವೆಂಬರ್ 14 ನಮ್ಮ ದೇಶದ ಪ್ರಪ್ರಥಮ ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರೂ ಅವರ ಜನ್ಮದಿನ.

ದಿ ಡಿಸ್ಕವರಿ ಆಫ್ ಇಂಡಿಯಾ, ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ, ಲೆಟರ್ ಟು ಹಿಸ್ ಸಿಸ್ಟರ್, ಲೆಟರ್ಸ್ ಫ್ರಾಂ ಅ ಫಾದರ್ ಟು ಹಿಸ್ ಡಾಟರ್ ಇಂತಹ ಮಕ್ಕಳನ್ನೇ ಗಮನದಲ್ಲಿಟ್ಟುಕೊಂಡು ರಚಿಸಿದ ಅತಿ ಅಮೂಲ್ಯವಾದ ಕೃತಿಗಳನ್ನು ನಮಗಾಗಿ ಕೊಟ್ಟ ಜವಾಹರರಿಗೆ ಮಕ್ಕಳೆಂದರೆ ಅತೀವ ಪ್ರೀತಿ. ದೇಶದ ಭವಿಷ್ಯ ಮಕ್ಕಳ ಕೈಯಲ್ಲಿದೆ ಎಂದು ಬಲವಾಗಿ ನಂಬಿದ್ದ ನೆಹರೂ ಅವರ ಹೃದಯವನ್ನು ಅರಿಯಬೇಕಾದರೆ ಅವರು ತಮ್ಮ ಮಗಳು ಇಂದಿರಾ ಪ್ರಿಯದರ್ಶಿನಿಗೆ ಬರೆದ ಪತ್ರಗಳನ್ನು ನಾವು ಒಮ್ಮೆ ಓದಬೇಕು. ಅವರು ಜೈಲಿನಲ್ಲಿದ್ದಾಗ ಬರೆದ ಒಕ್ಕಣೆಗಳು ಅವು! 1928ರ ಸಮಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಲಹಾಬಾದ್ ಜೈಲನ್ನು ಅವರು ಸೇರುವಾಗ ಮಸ್ಸೂರಿಯಲ್ಲಿದ್ದ ಇಂದಿರಾಗೆ ಕೇವಲ 10 ವರ್ಷ ವಯಸ್ಸು. ಇಂಥ ವೇಳೆಯಲ್ಲಿ ತಮಗೆ ಮಗಳಿಗಾಗಿ ಸಮಯ ಕೊಡಲಾಗಲಿಲ್ಲವಲ್ಲ ಎಂಬ ಕೊರಗು ನೆಹ್ರೂ ಅವರನ್ನು ಕಾಡುತ್ತಿತ್ತು. ಒಬ್ಬ ಜವಾಬ್ದಾರ ತಂದೆಯಾಗಿ ಮಗಳಿಗೆ ಆ ವಯಸ್ಸಿನಲ್ಲಿ ಏನೇನನ್ನು ಹೇಳಬೇಕಿತ್ತೋ ಅವನ್ನೆಲ್ಲಾ ಅವರು ಮೂವತ್ತು ಪತ್ರಗಳ ಮೂಲಕ ಹೇಳುವುದಕ್ಕೆ ಪ್ರಯತ್ನಿಸಿದರು. ಆ ಪತ್ರಗಳಲ್ಲಿ ಮಾನವ ಇತಿಹಾಸ, ಜನಾಂಗಗಳ ಉದಯ, ಶಿಕ್ಷಣ ಇತ್ಯಾದಿಗಳ ಕುರಿತು ಅವರು ತುಂಬಾ ಕುತೂಹಲಕರವಾಗಿ ಬರೆದಿದ್ದಾರೆ.

ಜವಾಹರಲಾಲ್ ನೆಹರೂ ಅವರಿಗೆ ಚಾಚಾ ಅಂತ ಕರೆಯುವುದಕ್ಕೆ ಒಂದು ಕಾರಣವಿದೆ ನಿಮಗೆ ಗೊತ್ತಾ ಮಕ್ಕಳೆ?...

ಹಿಂದಿಯ ಚಾಚಾ ಕನ್ನಡದಲ್ಲಿ ಚಿಕ್ಕಪ್ಪ. ಹಾಗಾದರೆ ನಮ್ಮೆಲ್ಲರ ಪ್ರೀತಿಯ ಅಪ್ಪ ಯಾರು? ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ನಮ್ಮೆಲ್ಲರ ತಂದೆ ಸಮಾನ. ನೆಹ್ರೂ ಅವರು ಮಹಾತ್ಮಾ ಗಾಂಧಿಯವರಿಗೆ ಸಹೋದರನಂತಿದ್ದರು. ಈ ಕಾರಣದಿಂದಾಗಿ ಅವರಿಗೆ ಮಕ್ಕಳೆಲ್ಲರೂ ಚಾಚಾ ನೆಹರೂ ಅಂತ ಕರೆಯುವುದಕ್ಕೆ ಪ್ರಾರಂಭಿಸಿದರು.

1964ರಲ್ಲಿ ನಮ್ಮ ಪ್ರಥಮ ಪ್ರಧಾನಿ ನೆಹರೂ ಅವರು ನಿಧನರಾದ ಮೇಲೆ ಅವರ ಜನ್ಮದಿನವನ್ನು "ಮಕ್ಕಳ ದಿನ"ದ ರೂಪದಲ್ಲಿ ಆಚರಿಸಲು ಒಮ್ಮತದಿಂದ ನಿರ್ಧರಿಸಲಾಯಿತು.

ಮಕ್ಕಳ ದಿನಾಚರಣೆ ಅಂದರೆ ಕೇವಲ ರಜೆ ಘೋಷಿಸಿ, ಸಿಹಿ ಹಂಚಿ ಮರೆತು ಬಿಡುವುದಲ್ಲ. ಬದಲಿಗೆ ಮಕ್ಕಳ ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿ ಹೇಳಿದಂತೆ ಚಾಚೂ ತಪ್ಪದೇ ಅನುಷ್ಠಾನಗೊಳಿಸುವ ಕುರಿತು ಗಂಭೀರ ಹಾಗೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಲಿಂಗ ತಾರತಮ್ಯ ಹೋಗಲಾಡಿಸುವಿಕೆ, ಏಕ ಸಮಾನ ಸೌಕರ್ಯ (ಶಿಕ್ಷಣ, ಆರೋಗ್ಯ ಇತ್ಯಾದಿ) ಹಂಚಿಕೆ ಇತ್ಯಾದಿಗಳ ವಿಷಯದಲ್ಲಿ ನಾವು ಇನ್ನೂ ತುಂಬಾ ಹಿಂದುಳಿದಿದ್ದೇವೆ. ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯನಿರತರಾಗೋಣ. ಇದೇ ನಮ್ಮ ಪ್ರೀತಿಯ ಚಾಚಾ ನೆಹ್ರೂ ಅವರ ಆತ್ಮಕ್ಕೆ ನಾವು ನೀಡಬೇಕಾದ ನಿಜವಾದ ಶ್ರದ್ಧಾಂಜಲಿ ಅಲ್ವೇ ಮಕ್ಕಳೇ?

ಕೋವಿಡ್ ಸಂದರ್ಭದಲ್ಲಿ ಎಲ್ಲರೂ ಮನೆಯಿಂದಲೇ ಕಲಿಕೆಯನ್ನು ಮುಂದುವರಿಸಿದ್ದೀರಿ. ನಮ್ಮ ಕಲಿಕೆಯಲ್ಲಿ ಪ್ರಾಮಾಣಿಕತೆ ಇರಲಿ. ನಮ್ಮ ಮನಸ್ಸಿನ ದಾರಿ ತಪ್ಪಿಸೋದಕ್ಕೆ ನಮಗೆ ಬೇಕಾದಷ್ಟು ವಸ್ತುಗಳು ಕೈಗೆಟುಕುತ್ತವೆ. ಅವಕ್ಕೆ ಹೆಚ್ಚು ಮಹತ್ವ ಕೊಡದೇ, ಕಲಿಕೆಗೆ ಪೂರಕವಾದ ವಿಷಯಗಳ ಮೇಲೆ ಮಾತ್ರ ನಿಮ್ಮ ಗಮನ ಇರಲಿ ಮಕ್ಕಳೇ. ಗುಣಕಾರಿ ವ್ಯಾಕ್ಸಿನ್ ಬಂದು, ಕೊರೊನಾ ದೂರವಾಗಿ, ಮತ್ತೆ ನೀವೆಲ್ಲರೂ ಶಾಲೆಯತ್ತ ಮುಖ ಮಾಡುವ ದಿನಗಳು ಆದಷ್ಟೂ ಬೇಗ ಬರಲಿ ಅಂತ ಹಾರೈಸ್ತೀನಿ...

ನಿಮ್ಮ

***ಸಂತೋಷ್ ಮಾಮಾ***




**ಮಕ್ಕಳೊಂದಿಗೆ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ**

# ಬಹುಮುಖ ಪ್ರತಿಭೆಯ ಸವಿತಾ ಇನಾಂದಾರ

**'ಎಲ್ಲೇ ಇರು ಎಂತಾದರೂ ಇರು ಎಂದೆಂದೂ ಕನ್ನಡವಾಗಿರು..... ಓ ಕನ್ನಡ ತಾಯಿಯ ಮುದ್ದಿನ ಕರು...'**

ರಾಷ್ಟ್ರಕವಿ ಕುವೆಂಪು ಬರೆದ ಈ ಕವಿತೆಯನ್ನು ಯಾರು ತಾನೇ ಕೇಳಿಲ್ಲ..?

ಆದರೆ ಅದರಂತೆ ಬದುಕುವ ಕನ್ನಡಿಗರನೇಕರು ಕನ್ನಡ ನೆಲದಿಂದ ದೂರ ಹೋದರೂ ಕನ್ನಡ ಪ್ರೇಮವನ್ನು ಹೃದಯದಲ್ಲಿಟ್ಟುಕೊಂಡು ಕನ್ನಡಮ್ಮನ ಸೇವೆ ಮಾಡುತ್ತಿದ್ದಾರೆ.

ಅಂಥವರ ಸಾಲಿನಲ್ಲಿ ಈ ದಿಲ್ಲಿ ಕನ್ನಡತಿಯ ಸೇವೆ ಗಮನೀಯ. ಅವರೇ ಸವಿತಾ ಇನಾಂದಾರ.

ಕಳೆದ 32 ವರ್ಷಗಳಿಂದ ದೇಶದ ರಾಜಧಾನಿ ದಿಲ್ಲಿಯಲ್ಲಿದ್ದುಕೊಂಡೇ ನಿತ್ಯ ಕನ್ನಡತನಕ್ಕೆ ಹಂಬಲಿಸುವ ಪಾದರಸ.

ಬಹುಮುಖ ವ್ಯಕ್ತಿತ್ವದ ಸವಿತಾ ಇನಾಂದಾರ ಧಾರವಾಡ ಜಿಲ್ಲೆಯ ಸಂಗೀತಕ್ಕೆ ಪ್ರಸಿದ್ಧಿ ಪಡೆದ ಕುಂದಗೋಳ ಇವರ ತವರು. ಪ್ರತಿಷ್ಠಿತ ದೇಸಗತಿ ಮನೆತನ. ಸಹಜವಾಗಿಯೇ ಮನೆತನದ ಗತ್ತು, ಗೈರತ್ತು ಮುಂದಾಳತ್ವ ಸಹಜವಾಗಿಯೇ ಬಂದಿದ್ದವು. ಬಾಲ್ಯದಲ್ಲಿಯೇ ಸಂಗೀತದ ಗುಂಗು, ನೃತ್ಯದ ರಂಗು ಮೈಗೂಡಿಸಿಕೊಂಡು ಬಂದವರು. ಬಹುರೂಪಿಗಳು ಮನೆಯ ಮುಂದೆ ಬಂದರೆ ಆ ನಾದದೊಂದಿಗೆ ಹೋಗಿಬಿಡುವ ಸ್ವಭಾವದವರಾಗಿದ್ದ ಇವರಿಗೆ ನಾಟಕಾಭಿನಯ, ಕವಿತೆ ಬರೆಯುವದು ಹೀಗೆ ಸಾಂಸ್ಕೃತಿಕ ಲೋಕದ ಸೆಳೆತ ಇವರನ್ನು ಆವರಿಸಿಬಿಟ್ಟಿತ್ತು.

ಧಾರವಾಡದ ಕೃಷಿ ವಿಜ್ಞಾನ ವಿವಿಯಲ್ಲಿ ಹೋಂ ಸೈನ್ಸ್ ಪದವಿ ಪಡೆದ ಇವರು ವಿಜಯಪುರ ಜಿಲ್ಲೆಯ ಘೋಣಸಗಿ ಎಂಬ ಪುಟ್ಟ ಹಳ್ಳಿಯ ಇನಾಂದಾರ ಮನೆತನದ ಸೊಸೆಯಾದರು. ಕೈ ಹಿಡಿದ ಪತಿ ಶಿರೀಶ್ ಇನಾಂದಾರ, ದಿಲ್ಲಿಯಲ್ಲಿದ್ದುಕೊಂಡೇ ಇವರ ಆಡುಂಬೋಲಗಳಿಗೆ ನೀರೆರೆದು ನಿಂತರು. ಹೀಗಾಗಿ ತಮ್ಮ ಅಭಿಪ್ಸೆಗಳಿಗೆ ತಕ್ಕಂತೆ ಒಂದೊಂದೇ ಮೆಟ್ಟಿಲುಗಳನ್ನು ಏರುತ್ತ ಸಾಗಿದ





**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಂದ ಅಭಿನಂದನೆ ಸ್ವೀಕರಿಸುತ್ತಿರುವ ಸವಿತಾ ಇನಾಂದಾರ್**

ಸವಿತಾ ಇನಾಂದಾರ ಎಂದರೆ ದಿಲ್ಲಿ ಕರ್ನಾಟಕ ಸಂಘದಲ್ಲಿ ಸುಪರಿಚಿತ ಹೆಸರಾಯಿತು.

ದಿಲ್ಲಿಯಲ್ಲಿದ್ದುಕೊಂಡೇ ಅಲ್ಲಿನ ಮಹಿಳಾ ಮಂಡಳಕ್ಕೆ ಹೊಸ ಚೈತನ್ಯ ತಂದುಕೊಟ್ಟವರು. ವಾರಕ್ಕೊಂದಾವರ್ತಿ ಒಂದಿಲ್ಲ ಒಂದು ಕನ್ನಡದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ನಾವಿನ್ಯತೆ ಮೂಡಿಸಿದರು. ಸತತ ನಾಲ್ಕು ವರ್ಷಗಳ ಕಾಲ ಅಧ್ಯಕ್ಷೆಯಾಗಿ. ಅಲ್ಲಿನ ಕನ್ನಡಿಗರಷ್ಟೇ ಅಲ್ಲದೇ ಆ ಪರಿಸರದವರಲ್ಲಿ ಪ್ರಭಾವ ಬೀರಿ ಕನ್ನಡದ ಕಾರ್ಯಕ್ರಮಕ್ಕೆ ಬರುವಂತೆ ಚುಂಬಕ ಶಕ್ತಿಯಾದವರು.

ದಿಲ್ಲಿಯಲ್ಲಿಯೇ 35ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸ್ವತಃ 20ಕ್ಕೂ ಹೆಚ್ಚು ಸ್ವತಃ ನಾಟಕಗಳನ್ನು ರಚಿಸಿ ನಿರ್ದೇಶಿಸಿ ಮಂಡಳಿಗಳಲ್ಲಿ ಮತ್ತು ದಿಲ್ಲಿ ಕರ್ನಾಟಕ ಸಂಘದಲ್ಲಿಯೂ ಹೊಸ ಚೈತನ್ಯ ತುಂಬಿದರು. ರಂಗಿನೋಕುಳಿ ಎಂಬ ಕವಿತಾ ಸಂಕಲನ ಮತ್ತು ಮಧುರ ಮಿಲನ ಎಂಬ ನಾಟಕ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ್ದಾರೆ.

ಸಿನೇಮಾಗಳಲ್ಲಿ, ಜಾಹೀರಾತು ನಿರ್ಮಾಣದಲ್ಲಿ ಮತ್ತು ಧಾರಾವಾಹಿಗಳಲ್ಲಿ ಕಂಠದಾನ(ಡಬ್ಬಿಂಗ್), ಹವ್ಯಾಸಿ ಕಲಾವಿದೆಯಾಗಿ ಅನೇಕ ನಾಟಕಗಳಲ್ಲಿ ನಟನೆ, ವಾರ್ತಾವಾಚಕಿ, ಉದ್ಘೋಷಕಿಯಾಗಿ, ಗ್ರಾಮೀಣ ಭಾರತಿ ರೇಡಿಯೋಗಳಲ್ಲಿ ಸರಕಾರಿ ಇಲಾಖೆಗಳ ಅನೇಕ ಯೋಜನೆಗಳನ್ನು ಆಧರಿಸಿದ ಹಿಂದಿ ರೇಡಿಯೋ ಧಾರಾವಾಹಿಗಳನ್ನು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿ ಹೊಸ ಜನರಿಗೆ ಕನ್ನಡ ಕಲಿಸಿದ್ದಾರೆ. ಇಷ್ಟಕ್ಕೂ ಸಾಲದೆಂಬಂತೆ ಕನ್ನಡ ಬಾರದ ಮಾಡೆಲ್ಲಗಳಿಗೆ ಕನ್ನಡ ಕಲಿಸಿ ಚಿತ್ರೀಕರಣ ಮಾಡಿದ್ದಾರೆ.

ಹಾಡು ನೃತ್ಯವೆಂದರೆ ತೀರಿತು. ಹಬ್ಬವೇ ಸರಿ, ಸಾಮಾಜಿಕ ಸಮಸ್ಯೆಗಳನ್ನು ಇಟ್ಟುಕೊಂಡು ಸಂದೇಶ ಸಾರುವ ನೃತ್ಯ ಸಂಯೋಜಿಸಿ ಪ್ರದರ್ಶಿಸಿದ್ದಾರೆ.

ಮಹಿಳೆಯ ಮೇಲೆ ಆ್ಯಸಿಡ್ ಎರಚುವ ಹೀನ ಕೃತ್ಯದ ವಿರುದ್ಧ ಸಂಯೋಜಿಸಿ ಅಭಿನಯಿಸಿದ

### ಗಣ್ಯರಿಗೆ ವ್ಯಾಖ್ಯಾನಕಾರ್ತಿ

ಯುನೈಟೆಡ್ ಸ್ಟೇಟ್, ಮೆಕ್ಸಿಕೋ, ಹಾಂಕಾಂಗ್, ಸಿಂಗಪುರ, ಬ್ಯಾಂಕಾಕ್, ಮಲೇಶಿಯಾ(ಪೆನಾಂಗ) ಆಸ್ಟ್ರೇಲಿಯಾ(ಬ್ರಿಸ್ಬೇನ್) ಗಳಲ್ಲಿ ವ್ಯಾಖ್ಯಾನಕಾರಳಾಗಿ, ಅನುವಾದಕಿಯಾಗಿ ಕನ್ನಡ ಹಬ್ಬಿಸುವ ಕೆಲಸ ಮಾಡಿದ್ದಾರೆ. ಅಲ್ಲದೇ ಪ್ರಧಾನಿ ನರೇಂದ್ರ ಮೋದಿಜಿ ಅವರ ಭಾಷಣವನ್ನು ಅವರ ವೇದಿಕೆಯಲ್ಲಿಯೇ ವ್ಯಾಖ್ಯಾನ ಮಾಡಿದ್ದಾರೆ. ನಿಕಟಪೂರ್ವ ಪ್ರಧಾನ ಮಂತ್ರಿ ಮನಮೋಹನಸಿಂಗ್ ಮತ್ತು ಸೋನಿಯಾ ಗಾಂಧಿ, ಮಾಜಿ ಸಚಿವ ಮಣಿಶಂಕರ ಅಯ್ಯರ್ ಸೇರಿದಂತೆ ಅನೇಕರಿಗೆ ವ್ಯಾಖ್ಯಾನಕಾರ್ತಿಯಾಗಿ ಮಾಡಿದ್ದಾರೆ. ಕನ್ನಡ, ಹಿಂದಿ ಮತ್ತು ಮರಾಠಿಗಳಲ್ಲಿ ಏಕಕಾಲಕ್ಕೆ ಅನುವಾದಿಸುವ ಕಲೆ ಇವರಿಗೆ ಕರಗತ.

"ಮರೆಯದಿರು ಮರೆಯದಿರು
ಈ ನಿನ್ನ ಕರುನಾಡು
ಬೆಳವಲದ ಮಡಿಲಿರಲಿ ದಟ್ಟ ಕಾಡು
ನಿನ್ನ ಬೇರಿನ ಮೂಲ ನೀನು
ಹೊರ ದೇಶದ ಮುನ್ನ ಇಲ್ಲಿ ಭೇಟಿ ನೀಡು"

–ಸವಿತಾ ಇನಾಂದಾರ


ನೃತ್ಯರೂಪಕವಂತೂ ಮನಮಿಡಿಯುವಂತೆ ಯಶ ಕಂಡಿದೆ. ನಿರ್ಭಯಾ ಪ್ರಕರಣ, ಹೆಣ್ಣು ಭ್ರೂಣ ಹತ್ಯೆ, ವರದಕ್ಷಿಣೆ ಕುರಿತಂತೆ ಜಾಗೃತಿ ಹೀಗೆ ಅನೇಕ ಗೀತೆಗಳನ್ನು ಬರೆದು ಅದಕ್ಕೆ ಸಂಗೀತವನ್ನು ಸಂಯೋಜಿಸಿ ರಂಗ ಸಜ್ಜಿಕೆಯ ಮೇಲೆ ತಂದ ಯಶಸ್ಸು ಇವರದು. ಕೊರೊನಾ ಸಂದರ್ಭದಲ್ಲಿ ಉಡುಪಿಯ

ಇತ್ತೀಚೆಗಷ್ಟೇ ಸಿಡ್ನಿಯ ಕನ್ನಡ ವಾಣಿ ಬಾನುಲಿ ಅಧ್ಯಕ್ಷ ವಿಜಯಕುಮಾರ ಹಲಗಲಿ ಆಹ್ವಾನದಂತೆ ಆನ್‌ಲೈನ್‌ನಲ್ಲಿ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಕವಿತೆ ವಾಚನ ಮಾಡಿದ್ದಾರೆ. ಅಲ್ಲದೇ ಡಿಡಿ ಚಂದನದಲ್ಲಿ ಓ ಸಖಿ ಎಂಬ ಕಾರ್ಯಕ್ರಮದಲ್ಲಿ ಇವರ ಸಂದರ್ಶನವೂ ಪ್ರಸಾರವಾಗಿದೆ. ಅಂಬಿಕಾ ಕ್ರಿಯೇಶನ್ ನಿರ್ಮಾಪಕಿಯಾಗಿ, ನಿರ್ದೇಶಕಿಯಾಗಿ ಕೆಲಸ ಮಾಡುತ್ತಿದ್ದಾರೆ. ದಿಲ್ಲಿ ಕನ್ನಡತಿಯಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಮಿಂಚಿದ್ದಾರೆ. ಮಗ ಶುಚಿರ್ ಮಗಳು ಸುರಭಿ ಇವರಿಬ್ಬರು ಎಂಜಿನೀಯರ್ ಆಗಿದ್ದು ಇವರ ಚಟುವಟಿಕೆಗಳಿಗೆ ಪೂರಕವಾಗಿಯೇ ಸ್ಪಂದಿಸುತ್ತಿದ್ದಾರೆ. ಈ ದಿಲ್ಲಿ ಕನ್ನಡತಿಯ ಕನ್ನಡಾಭಿಮಾನ ಮಾತ್ರ ಅನುಕರಣೀಯ.

***ಸುಶೀಲೇಂದ್ರ ಕುಂದರಗಿ***

(ದಿನಾಂಕ 02.11.2020ರ ಸಂಯುಕ್ತ ಕರ್ನಾಟಕ ಪ್ರಕಟಿತ)

# ಮೇರು ಸಾಹಿತಿ ನೆನಪಿನ 'ಕಡಲ ಕಾರಂತರು'



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ದಿನಾಂಕ 10.10.2020ರಂದು ಕನ್ನಡ ಜ್ಞಾನಪೀಠ ಪುರಸ್ಕೃತ ಡಾ. ಕೆ. ಶಿವರಾಮ ಕಾರಂತರ ಜನ್ಮದಿನದ ಪ್ರಯುಕ್ತ ?ಕಡಲ ಕಾರಂತರು? ಎಂಬ ಕಾರ್ಯಕ್ರಮವನ್ನು ಅಂತರ್ಜಾಲ ಅಂಗಳದಲ್ಲಿ ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅನರ್ಘ್ಯ ಐ.ಎ.ಎಸ್. ಅಕಾಡೆಮಿಯ ಸ್ಥಾಪಕ ಹಾಗೂ ಮಾರ್ಗದರ್ಶಕರಾದ ಮನೋಜ್ ಮಡ್ತಿಲ ಅವರು ಮಾತನಾಡಿದರು.

ಕಾರಂತರು ಕಡಲಿನ ತೀರಕ್ಕಷ್ಟೇ ಸೀಮಿತವಲ್ಲ, ಕಡಲಿನಷ್ಟೇ ವಿಸ್ತಾರವಾಗಿದ್ದವರು. ಒಂದು ವಿಶ್ವವಿದ್ಯಾಲಯಕ್ಕೆ ಹೋಲಿಕೆ ಮಾಡಬಹುದಾದ ಪರಿಪೂರ್ಣ ವ್ಯಕ್ತಿತ್ವದ ಕಾರಂತರು ಓದಿದ್ದು ಕಡಿಮೆ, ದುಡಿದದ್ದು, ಕಲಿಸಿದ್ದು ಹೆಚ್ಚು. ತಮ್ಮ 96 ವರ್ಷದ ತುಂಬುಜೀವನಕ್ಕೆ ಸಾರ್ಥಕ್ಯದ ಅರ್ಥ ನೀಡಿದವರು. ಇಂತಹ ಕಾರ್ಯಕ್ರಮಗಳಿಂದ ನಾವು ಮತ್ತೆ ಮತ್ತೆ ಕಾರಂತರನ್ನು ತಿಳಿದು ಅವರಿಗೆ ಈ ಮೂಲಕ ನಮನಗಳನ್ನು ಸಲ್ಲಿಸುವುದು ಅರ್ಥಪೂರ್ಣ ಎಂದು ಹೇಳಿದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಾದ ಕು। ಅಭಿಷೇಕ್ ಉಭಾಳೆ ಅವರು ಕಾರಂತರ ಬಾಲ್ಯಜೀವನ, ಕು। ಶ್ರೇಷ್ಠಾ ಎಚ್. ತೇಲಿ ಅವರು ಮಕ್ಕಳ ಸಾಹಿತ್ಯಕ್ಕೆ ಕಾರಂತರ ಕೊಡುಗೆ, ಕು। ಸಿ. ಬಿ. ವೈಷ್ಣವಿ ಅವರು ಕಾರಂತರ ವಿಜ್ಞಾನ ಪ್ರಪಂಚ ಹಾಗೂ ಕು। ಅದಿತಿ ಜಿ. ಕೆ. ಅವರು ಕಾರಂತರ ವ್ಯಕ್ತಿತ್ವ ಒಂದು ನೋಟ ಎಂಬ ವಿಚಾರಧಾರೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಕ್ರಮದ ವೀಕ್ಷಕರಿಗೆ ಕು। ಅದಿತಿ ಜಿ.ಕೆ. ಅವರು ಪುತ್ತೂರಿನಲ್ಲಿದ್ದ ಕಾರಂತರ ಬಾಲವನ, ಕಾರಂತರು ಇದ್ದ ಮನೆ, ಬಳಸುತ್ತಿದ್ದ ಗ್ರಂಥಾಲಯ ಇವುಗಳ ದೃಶ್ಯಾವಳಿಗಳನ್ನು ನೇರಪ್ರಸಾರದಲ್ಲಿ ವೀಕ್ಷಿಸಲು ಅವಕಾಶ ಒದಗಿಸಿದ್ದು ವಿಶೇಷವಾಗಿತ್ತು.

ಅಧ್ಯಕ್ಷತೆಯನ್ನು ವಹಿಸಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವ್ಯವಸ್ಥಾಪಕ ಡಾ. ಎಂ. ಎಸ್. ಶಶಿಕುಮಾರ್ ಅವರು ಕಾರಂತರು ಪ್ರಕೃತಿಯನ್ನು ಪ್ರೀತಿಸಿ ಅದರ ಜೊತೆ ಬೆರೆತವರು. ಪ್ರಕೃತಿಯ ಒಂದೊಂದು ಜೀವಗಳ ಜೊತೆ ಮಾತನಾಡುತ್ತಿದ್ದವರು. ವಿಜ್ಞಾನದ ಬಗೆಗಿನ ಅವರ ಕಾಳಜಿ ವಿಶೇಷವಾದುದು. ಶಿಕ್ಷಣದ ಬಗ್ಗೆ ಅಪಾರ ಕಾಳಜಿಯಿದ್ದ ಕಾರಂತರು ಸಾಹಿತಿ ಮಾತ್ರವಲ್ಲ, ಓರ್ವ ದಾರ್ಶನಿಕ. ಇವರ ವಿಚಾರಧಾರೆಗಳನ್ನು ಯುವ ತಲೆಮಾರಿಗೆ ತಲುಪಿಸುವಂತಹ ಇಂತಹ ಕಾರ್ಯಕ್ರಮ ಅನುಕರಣೀಯ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷ ಚಂದ್ರಶೇಖರ ಎನ್. ಪಿ. ಅವರು ಕಾರ್ಯಕ್ರಮಕ್ಕೆ ಶುಭ ಹಾರೈಸಿ ಮಾತನಾಡಿದರು.

ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯೆ ಮಾಲಿನಿ ಪ್ರಹ್ಲಾದ್, ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಎಂ. ಎಸ್. ಲಾವಣ್ಯ ವಂದಿಸಿದರು. ಅರವಿಂದ ಬಿಜೈ ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜೈ***




**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ದೂರವಾಣಿ : 011–26109615 / 26104818**

# ಭಾಷಾ ಕಲಿಕೆಯ ಮೂಲತತ್ವಗಳ ಕುರಿತ ತರಬೇತಿ



ಭಾಷಾ ಕಲಿಕೆಯ ಸಿದ್ಧಾಂತಗಳು ಮತ್ತು ಕ್ರಮಗಳನ್ನು ಶಿಕ್ಷಕರಿಗೆ ಪರಿಚಯಿಸುವ ಸಲುವಾಗಿ ಹಾಗೂ ಹೊರನಾಡಿನಲ್ಲಿ ಕನ್ನಡಿಗರಿಗೆ ಹಾಗೂ ಕನ್ನಡೇತರರಿಗೆ ಕನ್ನಡ ಭಾಷೆಯನ್ನು ಕಲಿಸುವ ವಿಧಾನದ ಕುರಿತಾಗಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ಭಾಷಾ ಕಲಿಕೆಯ ಮೂಲತತ್ವಗಳು ಎಂಬ ಕನ್ನಡ ಕಲಿಕಾ ತರಬೇತಿ ಕಾರ್ಯಕ್ರಮವನ್ನು ಇತ್ತೀಚೆಗೆ ಅಂತರ್ಜಾಲದಲ್ಲಿ ಆಯೋಜಿಸಲಾಗಿತ್ತು.

ತರಬೇತಿಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಜವಾಹರಲಾಲ ನೆಹರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ನಿವೃತ್ತ ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ಭಾಷಾ ಕಲಿಕೆಯನ್ನು ಸಮಾಜ ಮುಖ್ಯ ಎಂದು ಭಾವಿಸುತ್ತಿಲ್ಲ. ವರ್ತಮಾನದಲ್ಲಿ ಭಾಷಾಬೋಧನೆಯು ಅತ್ಯುತ್ಕೃಷ್ಟವಾದ ಕಾರ್ಯವಾಗಿದೆ. ಭಾಷಾ ಕಲಿಕೆ ಒಂದು ಆಟ, ಸಂತೋಷ. ಅದೆಂದೂ ಯಾಂತ್ರಿಕವಾಗಬಾರದು. ಹೊರನಾಡಿನಲ್ಲಿ ಕನ್ನಡ ವಾತಾವರಣ ಇಲ್ಲ ಹಾಗಾಗಿ ಮಗುವಿಗೆ ಕನ್ನಡ ಕಲಿಕೆ ಕಷ್ಟವಾಗುತ್ತದೆ. ಮಕ್ಕಳಿಗೆ ಭಾಷಾ ವಾತಾವರಣವನ್ನು ಕಲ್ಪಿಸಿಕೊಡಬೇಕು. ಇಲ್ಲಿಯ ವಾತಾವರಣಕ್ಕೆ ತಕ್ಕ ಹಾಗೆ ಪಠ್ಯಕ್ರಮವನ್ನು ಸ್ಥಳೀಕರಣ ಮಾಡಿಕೊಳ್ಳಬೇಕು ಎಂದು ಹೇಳಿದರು.

ತರಬೇತಿ ಕುರಿತು ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ವಿದ್ಯಾರ್ಥಿಯ ಕಲಿಕೆ ಪರಿಪೂರ್ಣವಾಗಬೇಕಾದರೆ ಮೊದಲು ಭಾಷಾ ಕಲಿಕೆ ಪರಿಣಾಮಕಾರಿಯಾಗಬೇಕು. ಭಾಷೆಯ ಮೂಲಕ ಕಲಿಕೆಯ ಗುಣಮಟ್ಟವನ್ನು ಗಟ್ಟಿಗೊಳಿಸುವುದು ನಮ್ಮ ಸಂಸ್ಥೆಯ ಆದ್ಯತೆಯಾಗಿದೆ. ಕನ್ನಡವನ್ನು ಬೆಳೆಸುವಲ್ಲಿ ಕನ್ನಡ ಭಾಷಾ ಶಿಕ್ಷಕರಷ್ಟೇ ಕನ್ನಡ ಶಿಕ್ಷಕರ ಕಾರ್ಯವೂ ಆಗಿದೆ ಎಂದು ಹೇಳಿದರು. ಮೂರು ದಿನದ ತರಬೇತಿಯಲ್ಲಿ ದೆಹಲಿ ಕನ್ನಡ ಶಾಲೆ, ಗುರುಗಾಂವ್ ಕನ್ನಡ ಕಲಿಕಾ ಕೇಂದ್ರ ಹಾಗೂ ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಕನ್ನಡ ಶಿಕ್ಷಕರು ಭಾಗವಹಿಸಿದ್ದರು. ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್ ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಕನ್ನಡ ಶಿಕ್ಷಕ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ಕನ್ನಡ ಕಲಿಕೆ ಕುರಿತ ತರಬೇತಿ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ಆನ್‌ಲೈನ್ ಮೂಲಕ ಕನ್ನಡ–ಕನ್ನಡೇತರರಿಗೆ ಕನ್ನಡ ಕಲಿಸುವ ಮೂರು ತಿಂಗಳ ಕನ್ನಡ ಭಾಷಾ ಕಲಿಕಾ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಇತ್ತೀಚೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ನಡೆಯಿತು.

ಜವಾಹರಲಾಲ ನೆಹರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ವಿಶ್ವನಾಥ ಅವರು ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಕನ್ನಡ ಜನರು ಎಲ್ಲರನ್ನು ಪ್ರೀತಿಸುವವರು ಹಾಗೂ ಎಲ್ಲರೊಳಗೆ ಒಂದಾಗುವವರು. ಬೇರೆ ಭಾಷೆಯನ್ನು ಕಲಿಯುವುದರ ಜೊತೆ ನಮ್ಮ ಭಾಷೆಯನ್ನು ಇತರರಿಗೆ ಕಲಿಸುವ ಹೃದಯ ಶ್ರೀಮಂತಿಕೆಯುಳ್ಳವರು. ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ಕನ್ನಡ ಒಂದು ಭಾಷೆ ನಿಜ. ಆದರೆ ಅದು ಕನ್ನಡ ಜನರ ಸಂಸ್ಕೃತಿಯನ್ನು ಎಚ್ಚರಿಸುವಂತಹ, ನಾಗರೀಕತೆಯನ್ನು ಉತ್ತುಂಗಕ್ಕೆ ಕೊಂಡೊಯ್ಯುವಂತಹ, ಬದುಕನ್ನು ಬೆಳಗುವಂತಹ ಸೂರ್ಯ, ಶಕ್ತಿ, ಪಂಚಭೂತ ಎನಿಸಿಕೊಂಡಿದೆ. ಈ ಪರಿಕಲ್ಪನೆಗೆ ನಿಜವಾದ ಅರ್ಥ ಬರುವುದು ಇಂತಹ ಕಾರ್ಯಗಳಿಂದ. ಕನ್ನಡದ ಕಂಪನ್ನು ಉತ್ತರ ಭಾರತೀಯರಿಗೂ ಪಸರಿಸುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕೈಂಕರ್ಯ ನಿಜಕ್ಕೂ ಅಭಿನಂದನಾರ್ಹ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಉಪಾಧ್ಯಕ್ಷ ಟಿ. ಎಂ. ಮೈಲಾರಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ಬಿ. ಎಲ್. ಮೋಹನ್ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್, ಕನ್ನಡ ಶಿಕ್ಷಕ ಅರವಿಂದ ಬಿಜ್ಜೈ ಉಪಸ್ಥಿತರಿದ್ದರು. ಉಪಾಧ್ಯಕ್ಷ ಚಂದ್ರಶೇಖರ ಎನ್. ಪಿ. ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್ ವಂದಿಸಿದರು. ಶಿಕ್ಷಕಿ ರೇಖಾ ಐ. ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ರಾಜ್ಯೋತ್ಸವ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ (ರಿ.) ವತಿಯಿಂದ 65ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕನ್ನಡ ಶಿಕ್ಷಕರು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದ ಜಯ ಜಯ ಜಯ ಕನ್ನಡ ರಾಜೇಶ್ವರಿ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿದ್ದ ಶಿಕ್ಷಣ ಇಲಾಖೆ, ಪಶ್ಚಿಮ ಎ ನವದೆಹಲಿ ಇದರ ಉಪನಿರ್ದೇಶಕರಾದ ಡಾ. ಮಲ್ಲಿಕಾರ್ಜುನ ಕೆ. ಎಸ್. ಅವರು ದೀಪ ಬೆಳಗಿಸಿ ಚಾಲನೆ ನೀಡಿ ಕನ್ನಡ ಭುವನೇಶ್ವರಿಗೆ ಪುಷ್ಪಾರ್ಚನೆಗೈದು, ಪ್ರಾಥಮಿಕ ಶಿಕ್ಷಕರ ನವೀಕೃತ ಕೊಠಡಿಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ನಮ್ಮ ಕನ್ನಡ ನಾಡು ಸಾಹಿತಿಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ನಾವು ಎಲ್ಲೇ ಇದ್ದರೂ ನಮ್ಮ ನಾಡಿನ ಬಗ್ಗೆ ಅಭಿಮಾನವಿರಬೇಕು ಎಂದರು. ಶಾಲಾ ವಾತಾವರಣ, ಸಂರಚನೆ ಹಾಗೂ ಸುಸಜ್ಜಿತ ವ್ಯವಸ್ಥೆಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ಈ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡುವಲ್ಲಿ ಶಿಕ್ಷಣ ಇಲಾಖೆಯ ಜೊತೆಗೆ ಕನ್ನಡಿಗನಾದ ನನ್ನ ಸಹಕಾರವೂ ಇದೆಯೆಂದು ಈ ಸಂದರ್ಭದಲ್ಲಿ ಭರವಸೆ ನೀಡಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತ 1959ರಲ್ಲಿ ರಾಜ್ಯಸಭಾ ಉಪಸಭಾಧ್ಯಕ್ಷರಾಗಿದ್ದ ಎಸ್.ವಿ. ಕೃಷ್ಣಮೂರ್ತಿ ರಾವ್ ಸ್ಥಾಪಿಸಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು ತದನಂತರ ಮುನ್ನಡೆಸಿದವರು ಸರೋಜಿನಿ ಮಹಿಷಿ ಹಾಗೂ ಹಿರಿಯ ಕನ್ನಡಿಗರು. ಅನಂತರದಲ್ಲಿ ಕರ್ನಾಟಕದ ಯಾವ ರಾಜಕಾರಣಿಗಳು ಈ ಸಂಸ್ಥೆಯ ಅಭಿವೃದ್ಧಿಯ ಕುರಿತಾಗಿ ಆಸಕ್ತಿ ತೋರಿಸಿಲ್ಲ. ದೆಹಲಿಯ ಕ್ರೇಜಿವಾಲ್ ಸರಕಾರದ ಶಾಲೆಯೆದುರು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಅಸ್ತಿತ್ವವನ್ನು ಉಳಿಸಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯನ್ನು ತಲೆ ಎತ್ತಿ ನಿಲ್ಲುವಂತೆ ಮಾಡಲು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿ, ಸಚಿವರು, ಸಂಸದರು, ಶಾಸಕರು ಹಾಗೂ ಸರಕಾರದಿಂದ ಆಯ್ಕೆಯಾದ ಪ್ರತಿನಿಧಿಗಳು ಮುಂದಾಗಬೇಕು ಎಂದು ಮನವಿ ಮಾಡಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಅವರು ರಾಜ್ಯೋತ್ಸವದ ಶುಭಾಶಯ ಹೇಳಿ ಹಿತ ನುಡಿದರು.

ಕನ್ನಡ ಶಿಕ್ಷಕರಿಂದ ಮೊಳಗಿದ ನಾಡಗೀತೆ, ಕನ್ನಡೇತರ ಶಿಕ್ಷಕರಾದ ಬಿದಿಶಾ ಅವರಿಂದ ಮೂಡಿಬಂದ ಬಸವಣ್ಣನ ವಚನ, ಕನ್ನಡ ಪೋಷಕರಿಂದ ಪ್ರಸ್ತುತಗೊಂಡ ಕರ್ನಾಟಕವೆಂದರೆ ಬರಿ ನಾಡಲ್ಲ ಎಂಬ ಗೀತೆ ಜೊತೆಗೆ ಶಾಲಾ ಆವರಣದ ಸುತ್ತಲೂ ರಾರಾಜಿಸುತ್ತಿದ್ದ ಕನ್ನಡ ಬಾವುಟ, ಕೊರಳಲ್ಲಿ ಮಿನುಗುತ್ತಿದ್ದ ಕನ್ನಡ ಶಾಲು ಹೊರನಾಡಿನ ಮಣ್ಣಿನಲ್ಲೂ ಕನ್ನಡದ ಕಂಪನ್ನು ಪಸರಿಸುತಿತ್ತು

ಸಂಸ್ಥೆಯ ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ. ಆರ್., ಮಾಲಿನಿ ಪ್ರಹ್ಲಾದ್, ಜಯಶ್ರೀ ಬಸವರಾಜು, ಗಿರೀಶ್ ಎಸ್., ಬಿ.ಎಲ್. ಮೋಹನ್ ಹಾಗೂ ಕನ್ನಡ ಶಾಲಾ ಶಿಕ್ಷಕ–ಶಿಕ್ಷಕೇತರ ವೃಂದದವರು, ಕನ್ನಡ ಪೋಷಕರು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಸಂತೋಷ ಕೆ. ಕೆ. ವಂದಿಸಿದರು. ಶಿಕ್ಷಕರಾದ ರೇಖಾ ಐ. ಕಾರ್ಯಕ್ರಮ ನಿರೂಪಿಸಿದರು.

**ಅರವಿಂದ ಬಿಜೈ**




## ಓದುಗರ ಸ್ಪಂದನ

ಅಭಿಮತಕ್ಕೆ 30!. ಗೊತ್ತಾಗಲೇ ಇಲ್ಲ. ಅಭಿನಂದನೆಗಳು

ಸಂಘದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಇಲ್ಲದ ಸಂಧರ್ಭದಲ್ಲೂ ಯಶಸ್ವಿಯಾಗಿ ಅಭಿಮತ ತರುತ್ತಿರುವುದು ನಿಜಕ್ಕೂ ಶ್ಲಾಘನೀಯ. ಅದೆಷ್ಟೋ ಬಾರಿ 24 ಪುಟಗಳೂ ಸಾಲದಷ್ಟು ಕಾರ್ಯಕ್ರಮಗಳು. ಆದರೆ ಈಗ ವಿಭಿನ್ನ ಪರಿಸ್ಥಿತಿ ಇದೆ. ಒಮ್ಮೆಯೂ ನಿಲ್ಲದಂತೆ ತರುವುದು ಸವಾಲು. ಪತ್ರಿಕೆ ಹೀಗೇ ನಿರಂತರವಾಗಿ ಸಾಗುತ್ತಿರಲಿ ಎಂದು ಹಾರೈಸುತ್ತೇನೆ.

*ಉಷಾ ಭರತಾದ್ರಿ*



# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Nov-2020, Vol. No.31, Issue No. 2, Price Rs.1/-
RNI Regn. No. 53405/91, DL-SW-1/4016/19-21
Date of Publication : Nov 8th / 9th, Posting Date : 10th / 11th, Total Pages-16, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ
ಇರುವ ಕಲಾವಿದ ಜಿ.ಎಸ್. ಪಾಟೀಲ್ ಅವರ ಕಲಾಕೃತಿ